بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 21

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

26 ಮೇ 2022, 26 ಹಿಜ್ರತ್ 1401 ಹಿಜರಿ ಶಮ್ಸಿ,
24 ಶವ್ವಾಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَاَنۡذِرۡ بِہِ الَّذِیۡنَ یَخَافُوۡنَ اَنۡ یُّحۡشَرُوۡۤا اِلٰی رَبِّہِمۡ لَیۡسَ لَہُمۡ مِّنۡ دُوۡنِہٖ وَلِیٌّ وَّلَا شَفِیۡعٌ لَّعَلَّہُمۡ یَتَّقُوۡنَ

(ಅಲ್ ಅನ್‌ಆಮ್ : 52)

ಅಂದರೆ: ತಮ್ಮ ಪ್ರಭುವಿನ ಸನ್ನಿಧಿಯಲ್ಲಿ ಒಂದುಗೂಡಿಸಲ್ಪಡಲಿದ್ದೇವೆಂದೂ ತಮಗೆ ಅವನ ಹೊರತು ರಕ್ಷಕನಾಗಿ ಅಥವಾ ಶಿಫಾರಸು ಸ್ವೀಕರಿಸುವವನಾಗಿ ಯಾರೂ ಇಲ್ಲವೆಂದೂ ಭಯಪಡುವವರಿಗೆ, ಇದರ (ಈ ಖುರ್‌ಆನ್) ಮೂಲಕ ಮುನ್ನೆಚ್ಚರಿಕೆ ನೀಡು– ಅವರು ಭಯಭಕ್ತಿಯುಳ್ಳವರಾಗಲಿಕ್ಕೋಸ್ಕರ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ನಫಿಲ್ ಉಪವಾಸವನ್ನು ಮುರಿಯುವುದು ಸೂಕ್ತ

**(1968)** ವಹಬ್ ಬಿನ್ ಅಬ್ದುಲ್ಲ ಸವಾಯಿ ಅವರು ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್(ಸ)ರವರು ಹಝ್‌ರತ್ ಸಲ್ಮಾನ್(ರ) ಮತ್ತು ಹಝ್‌ರತ್ ಅಬು ದರ್ದಾ(ರ) ಅವರನ್ನು ಸಹೋದರರನ್ನಾಗಿ ಮಾಡಿದರು. ಹಝ್‌ರತ್ ಸಲ್ಮಾನ್(ರ) ಹಝ್‌ರತ್ ಅಬು ದರ್ದಾ(ರ) ಅವರನ್ನು ಭೇಟಿ ಮಾಡಲು ಹೋದಾಗ, ಹಝ್‌ರತ್ ಉಮ್ಮೆ ದರ್ದಾ(ರ) ಅವರು ಕೊಳಕು ಬಟ್ಟೆಗಳನ್ನು ಧರಿಸಿರುವುದನ್ನು ಕಂಡರು. ಅವರು ಅವರನ್ನು ಕೇಳಿದರು: ನೀವು ಹೇಗಿದ್ದೀರಿ? ಅದಕ್ಕೆ ಅವರು ಹೇಳಿದರು: ನಿಮ್ಮ ಸಹೋದರ ಅಬುದರ್ದಾ(ರ) ಅವರಿಗೆ ಈ ಜಗತ್ತಿನಲ್ಲಿ ಯಾವುದು ಅಗತ್ಯವಿಲ್ಲ. ಅಷ್ಟರಲ್ಲಿ ಹಝ್‌ರತ್ ಅಬು ದರ್ದಾ(ರ) ಬಂದು ಹಝ್‌ರತ್ ಸಲ್ಮಾನ್(ರ) ಅವರಿಗೆ ಆಹಾರವನ್ನು ಸಿದ್ಧಪಡಿಸಿದರು ಮತ್ತು ಅವರಿಗೆ ತಿನ್ನಲು ಹೇಳಿದರು (ಮತ್ತು) ಹೇಳಿದರು: ನಾನು ಉಪವಾಸ ಮಾಡುತ್ತಿದ್ದೇನೆ. ಹಝ್‌ರತ್ ಸಲ್ಮಾನ್(ರ) ಹೇಳಿದರು: ನೀವು ತಿನ್ನುವವರೆಗೂ ನಾನು ತಿನ್ನುವುದಿಲ್ಲ. (ವಹಬ್) ಹೇಳಿದರು ಹಝ್‌ರತ್ ಅಬೂದರ್ದಾ(ರ) ಆಹಾರವನ್ನು ಸೇವಿಸಿದರು ನಂತರ ರಾತ್ರಿಯಾದಾಗ ಹಝ್‌ರತ್ ಅಬೂದರ್ದಾ(ರ) ಎದ್ದು ನಿಂತು ನಮಾಝ್ ನಿರ್ವಹಿಸಿದರು (ಹಝ್‌ರತ್ ಸಲ್ಮಾನ್(ರ)) ಹೇಳಿದರು: ಮಲಗು. ಆಗ ಅವರು ಮಲಗಿಕೊಂಡರು. ನಂತರ ಅವರು ನಮಾಝ್‌ಗೆ ಏಳುತ್ತಿರುವಾಗ ಅವರು ಹೇಳಿದರು: ಇನ್ನು ಮಲಗು ಆಗ ಅವರು ಮಲಗಿಕೊಂಡರು. ತದನಂತರ ರಾತ್ರಿಯ ಕೊನೆಯ ಭಾಗ ಬಂದಾಗ, ಹಝ್‌ರತ್ ಸಲ್ಮಾನ್(ರ) ಹೇಳಿದರು: ಈಗ ಎದ್ದೇಳಿ ಮತ್ತು ಅವರಿಬ್ಬರೂ ನಮಾಝ್ ನಿರ್ವಹಿಸಿದರು ಮತ್ತು ಹಝ್‌ರತ್ ಸಲ್ಮಾನ್(ರ) ಅವರಿಗೆ ಹೇಳಿದರು: ನಿಮ್ಮ ಭಗವಂತನ ನಿಮ್ಮ ಮೇಲೆ ಹಕ್ಕಿದೆ ಮತ್ತು ನಿಮ್ಮ ಆತ್ಮದ ಹಕ್ಕು ಇದೆ ಅದೇ ರೀತಿ ನಿಮ್ಮ ಹೆಂಡತಿಗೆ ನಿಮ್ಮ ಮೇಲೆ ಹಕ್ಕಿದೆ. ಆದುದರಿಂದ ಹಕ್ಕು ಇರುವ ಪ್ರತಿಯೊಬ್ಬರಿಗೂ ಕೊಡು ಹಕ್ಕು ನೀಡಿರಿ. ಹಝ್‌ರತ್ ಅಬು ದರ್ದಾ(ರ) ಪ್ರವಾದಿ(ಸ) ರವರ ಬಳಿಗೆ ಬಂದು ಇದನ್ನು ಪ್ರಸ್ತಾಪಿಸಿದರು, ಆಗ ಪ್ರವಾದಿ(ಸ) ರವರು ಅವರಿಗೆ ಹೇಳಿದರು: ಸಲ್ಮಾನ್(ರ) ಸತ್ಯವನ್ನು ಹೇಳಿದ್ದಾರೆ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

## ಶಾಶ್ವತ ಜೀವಂತ ಪ್ರವಾದಿ ಎಂದರೆ ಪ್ರವಾದಿ ಮುಹಮ್ಮದ್[ಸ] ಮಾತ್ರ ಆಗಿರಬಹುದು

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಜ್ಞಾನಿಗಳು ಮತ್ತು ನತದೃಷ್ಟರು ಎಂದೂ ಈ ವಿಷಯದ ಬಗ್ಗೆ ಗಮನ ಹರಿಸಲಿಲ್ಲ. ಹಝ್‌ರತ್ ರಸೂಲುಲ್ಲಾಹ್(ಸ) ರವರ ಪವಾಡಗಳ ಬಗ್ಗೆ ಆಕ್ಷೇಪವನ್ನೆತ್ತಿದ್ದಾರೆ. ಆದರೆ ಅವರು ಕುರುಡರಾಗಿ ಆಕ್ಷೇಪವನ್ನು ಮಾಡುತ್ತಾರೆ. ವಿಷಾದದ ಸಂಗತಿ ಎಂದರೆ ಆಕ್ಷೇಪ ಮಾಡುವವರಿಗೆ ಗೊತ್ತಿಲ್ಲ ನಮ್ಮ ಪ್ರವಾದಿ(ಸ) ರವರಿಂದ ಎಷ್ಟು ಪವಾಡಗಳು ಪ್ರಕಟಗೊಂಡಿವೆಯೋ ಅದನ್ನು ಇಲ್ಲಿವರೆಗಿನ ಎಲ್ಲ ಪ್ರವಾದಿಗಳ ಪವಾಡಗಳನ್ನು ತುಲನೆ ಮಾಡಿ ನೋಡಿದರೂ ಸರಿಸಾಟಿ ಆಗಲು ಸಾಧ್ಯವಿಲ್ಲ. ನಾನು ದೃಢವಾದ ವಿಶ್ವಾಸದಿಂದ ಹೇಳಬಲ್ಲೆನು ನಮ್ಮ ಪ್ರವಾದಿಯವರ ಪವಾಡಗಳು ಎಲ್ಲರಿಗಿಂತ ಮಿಗಿಲಾದುದು. ಪವಿತ್ರ ಖುರ್‌ಆನ್ ಪ್ರವಾದಿ(ಸ) ಅವರ ಭವಿಷ್ಯವಾಣಿಗಳಿಂದ ತುಂಬಿದೆ ಮತ್ತು ಖಿಯಾಮತ್ ದಿವಸದ ತನಕ ಹಾಗೂ ಅದರ ನಂತರದ ಭವಿಷ್ಯವಾಣಿಗಳನ್ನೂ ಒಳಗೊಂಡಿದೆ. ಎಲ್ಲಕ್ಕಿಂತ ಮಿಗಿಲಾಗಿ ಪ್ರವಾದಿ(ಸ) ರವರ ಭವಿಷ್ಯವಾಣಿಯ ಪುರಾವೆಯೆಂದರೆ ಪ್ರತಿಯೊಂದು ಯುಗದಲ್ಲೂ ಆ ಭವಿಷ್ಯವಾಣಿಗಳಿಗೆ ಜೀವಂತ ಪುರಾವೆಗಳನ್ನು ನೀಡುವವರಿದ್ದಾರೆ. ಆದುದರಿಂದ ಈ ಕಾಲದಲ್ಲಿ ಅಲ್ಲಾಹನು ನನ್ನನ್ನು ದೃಷ್ಟಾಂತವನ್ನಾಗಿಸಿ ಮಹಾನ್ ಭವಿಷ್ಯವಾಣಿಯನ್ನು ನೀಡಿದ್ದಾನೆ. ಅದರ ಕಾರಣ ಆಧ್ಯಾತ್ಮಿಕ ಹಾಗೂ ದೈವಿಕತೆಯ ಅರಿವಿಲ್ಲದ ಜನರಿಗೆ ದಾರಿದೀಪವಾಗಬೇಕು. ಮತ್ತು ನಮ್ಮ ಪ್ರವಾದಿ(ಸ) ಅವರ ಪವಾಡಗಳು ಶಾಶ್ವತವಾಗಿವೆ ಮತ್ತು ಸದಾಕಾಲಕ್ಕೆ ಪ್ರಚಲಿತವಾಗಿದೆ ಎಂಬುದನ್ನು ತೋರಿಸಬೇಕಾಗಿದೆ.

ಬನೀ ಇಸ್ರಾಈಲ್‌ನ ಉಳಿದ ಯಹೂದಿಗಳಲ್ಲಿ ಅಥವಾ ಕ್ರಿಶ್ಚಿಯನ್ನರಲ್ಲಿ ಹಝ್‌ರತ್ ಈಸ(ಅ) ಅವರನ್ನು ಕರ್ತನಾದ ದೇವರು ಎಂದು ಕರೆಯುವವರು ಯಾರಾದರೂ ಈ ಪವಾಡಗಳಲ್ಲಿ ನನ್ನೊಂದಿಗೆ ಸ್ಪರ್ಧಿಸುತ್ತಾರೆಯೇ? ನಾನು ದೃಢವಾಗಿ ಹೇಳುವುದೇನೆಂದರೆ ಯಾರೂ ಸಹ ಇಲ್ಲ. ಹೀಗಿದ್ದಲ್ಲಿ ಇದು ನಮ್ಮ ಪ್ರವಾದಿ(ಸ) ಅವರ ಅಧಿಕೃತ ಪವಾಡಗಳಿಗೆ ಸಾಕ್ಷಿಯಾಗಿದೆ ಏಕೆಂದರೆ ಓರ್ವ ಪ್ರವಾದಿಯ ಅನುಯಾಯಿಗಳಿಂದ ಪ್ರಕಟಗೊಳ್ಳುವ ದೃಷ್ಟಾಂತಗಳೆ ಅದರ ಸತ್ಯತೆಗೆ ಕಾರಣವಾಗಿರುತ್ತದೆ. ಅಂದಹಾಗೆ ನನಗೆ ನೀಡಲಾದ ಅಸಮಾನ್ಯ ದೃಷ್ಟಾಂತಗಳು, ಪವಾಡಗಳು ಭವಿಷ್ಯವಾಣಿಗಳ ಮಹೋನ್ನತವಾದ ದೃಷ್ಟಾಂತಗಳೇ ಅದಕ್ಕೆ ಸಾಕ್ಷಿಯಾಗಿದೆ. ಇವು ರಸೂಲುಲ್ಲಾಹ್(ಸ) ಅವರ ಜೀವಂತ ಪವಾಡಗಳಾಗಿವೆ, ಅದು ಯಾವ ಇತರ ಪ್ರವಾದಿಯ ಅನುಯಾಯಿಗಳಿಂದ ಸಾಧ್ಯವಿಲ್ಲ, ಇಂದು ಆ ಗೌರವ ಅಂದರೆ ತಮ್ಮ ಪ್ರವಾದಿಗಳ ಅನುಯಾಯಿಯಾಗಿ ತೋರಿಸುವುದು ಸಾಧ್ಯವಿಲ್ಲ ಆ ಗೌರವ ಕೇವಲ ಇಸ್ಲಾಮ್ ಧರ್ಮಕ್ಕೆ ಸಲ್ಲುತ್ತದೆ. ಅದರಿಂದ ತಿಳಿದುಬರುವುದು ಏನೆಂದರೆ ಸದಾಕಾಲಕ್ಕೆ ಜೀವಂತವಾಗಿರಲು ಅರ್ಹತೆ ಪಡೆದ ಪ್ರವಾದಿ, ಕೇವಲ ಪ್ರವಾದಿ ಮುಹಮ್ಮದ್(ಸ) ಅವರಾಗಿದ್ದಾರೆ. ಅವರ ಪವಿತ್ರ ಜೀವನ ಚರಿತ್ರೆಯಿಂದ ಮತ್ತು ಅನುಗ್ರಹದಾಯಕ ಶಕ್ತಿಯಿಂದ ಎಲ್ಲ ಕಾಲದಲ್ಲೂ ಓರ್ವ ಸುಧಾರಕ ಬಂದು ದೈವಿಕ ದೃಷ್ಟಾಂತಗಳ ಸಾಕ್ಷ್ಯ ವಹಿಸಿಕೊಳ್ಳುತ್ತಾರೆ.

**(ಮಲ್‌ಫೂಝಾತ್, ಸಂಪುಟ–1, ಪುಟ–373, ಖಾದಿಯಾನ್ 2018ರ ಪ್ರಕಟಣೆ)**

## ಉಪವಾಸದ ಪರಿಣಾಮವಾಗಿ, ಸರ್ವಶಕ್ತನಾದ ಅಲ್ಲಾಹನು ತನ್ನ ಇಲ್‌ಹಾಮ್ ಅನ್ನು ನೀಡುತ್ತಾನೆ, ನಿಜವಾದ ಕನಸ್ಸುಗಳಿಗೆ, ಸರಿಯಾದ ಕನಸ್ಸುಗಳಿಗೆ ಬಾಗಿಲು ತೆರೆಯುತ್ತಾನೆ ಮತ್ತು ಕಾಣದ ರಹಸ್ಯಗಳನ್ನು ಬಹಿರಂಗಪಡಿಸುತ್ತಾನೆ

ಆಧ್ಯಾತ್ಮಿಕ ಬಣ್ಣದಲ್ಲಿ ಉಪವಾಸದ ಪ್ರಯೋಜನಗಳಲ್ಲಿ ಒಂದು ಪರಿಣಾಮವೇನೆಂದರೆ, ಸರ್ವಶಕ್ತನಾದ ಅಲ್ಲಾಹನ ಇಲ್‌ಹಾಮ್ (ದೈವವಾಣಿ) ಮಾನವ ಹೃದಯದ ಮೇಲೆ ಅವತರಿಸುತ್ತದೆ. ಮತು ಆಧ್ಯಾತ್ಮಿಕ ಸ್ವಪ್ನವು ಹೆಚ್ಚು ಪ್ರಕಾಶಮಾನವಾಗಿ ಮತ್ತು ಪ್ರಬುದ್ಧವಾಗುತ್ತದೆ. ಅದರ ಬಗ್ಗೆ ಗಂಭೀರವಾಗಿ ಆಲೋಚಿಸಿದರೆ ನಮಗೆ ತಿಳಿದು ಬರುವುದೇನೆಂದರೆ, ಸರ್ವಶಕ್ತನಾದ ಅಲ್ಲಾಹನ ಅಭ್ಯಸದಲ್ಲಿ ಆದರ ಹೋಲಿಕೆಯು ಕಂಡುಬರುತ್ತದೆ. ಮನುಷ್ಯರಿಗಿರುವಂತೆ ಅವನಿಗೆ ಕಣ್ಣಿಲ್ಲ, ಆದರೆ ಅವನು ಬಸೀರ್ ನೋಡುವವನಾಗಿದ್ದಾನೆ. ಅವನಿಗೆ ಕಿವಿಯಿಲ್ಲ ಆದರೆ ಅವನು ಕೇಳುವವನಾಗಿದ್ದಾನೆ. ಹೀಗೆ ಅವನಲ್ಲಿ ಯಾವ ಅಭ್ಯಾಸ ಇಲ್ಲದಿದ್ದರು ಅವನು ಒಂದು

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳುವವರಿಗೆ 23 ವರ್ಷಗಳ ಅವಕಾಶ ದೊರೆಯಲು ಖಂಡಿತವಾಗಿಯೂ ಸಾಧ್ಯವಿಲ್ಲ. ಜಿಲ್ಲಾಧಿಕಾರಿ ನೆಹರ್ ಹಾಫೀಝ್ ಮುಹಮ್ಮದ್ ಯೂಸೂಫ್ ರವರ ತನ್ನ ದಾವೆಯ ಪ್ರಕಾರ ಅದರ ವಿರುದ್ಧವಾಗಿ ಸಾಬೀತು ಮಾಡಿ ತೋರಿಸಿದರೆ ಅವರಿಗೆ ಐದು ನೂರು ರೂಪಾಯಿಗಳ ಬಹುಮಾನ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಝುಮೀಮ ತೋಹ್ಫ ಗೋಲ್ಡವಿಯ" ರೂಹಾನಿ ಖಝಾಯಿನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಸುಳ್ಳು ಪ್ರವಾದಿಯ ದಾವೆ ಮಾಡುವವರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ತೀವ್ರವಾದ ಪ್ರಕೋಪ ವ್ಯಕ್ತಪಡಿಸಿದ್ದಾನೆ. ಮತ್ತು ಅವರಿಗಾಗಿ ಅತ್ಯಂತ ಕಠಿಣ ಶಿಕ್ಷೆ ವಿಧಿಸುವ ವಿವರ ನೀಡಿದ್ದಾನೆ. ಅಂತಹ ವ್ಯಕ್ತಿಯೊಬ್ಬನನ್ನು ಅಲ್ಲಾಹನು ಕಟುವಾದ ದುಷ್ಕರ್ಮಿ ಮತ್ತು ಅಪರಾಧಿ ಎಂದು ಸಾರಿದ್ದಾನೆ. ಏಕೆಂದರೆ ಅಂತಹ ವ್ಯಕ್ತಿಯೊಬ್ಬನು ಇಡೀ ಸಮಾಜದ ದುರ್ಮಾರ್ಗಕ್ಕೆ ಕಾರಣನಾಗುತ್ತಾನೆ. ಅಂದ ಹಾಗೆ ಅಂತಹ ವ್ಯಕ್ತಿಯೊಬ್ಬನಿಗೆ ಅಲ್ಲಾಹನು ಇಹಲೋಕದಲ್ಲಿಯೇ ಶಿಕ್ಷೆ ನೀಡುವ ವಾಗ್ದಾನ ನೀಡಿದ್ದಾನೆ. ಅದರಿಂದ ಸಮಾಜವು ದುರ್ಮಾರ್ಗದಿಂದ ರಕ್ಷಿಸಿಕೊಳ್ಳುವಂತಾಗಬಹುದು. ಅವನ ಘೋರವಾದ ಪರಿಣಾಮ ಕಂಡು ಲೋಕವು ಪಾಠ ಕಲಿಯಬಹುದು. ಅಲ್ಲಾಹನ ಸೂರ: ಅಲ್ ಹಾಖ್ಖ ದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಕುರಿತು ಹೇಳಿದನು.

"ಆತನು (ನಾವು ಅವತೀರ್ಣಗೊಳಿಸದ) ಕೆಲವು ಸುಳ್ಳು ಮಾತುಗಳನ್ನು ನಮ್ಮದೆಂದು ಹೇಳುತ್ತಿದ್ದರೆ, ನಾವು ಆತನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು. ಅನಂತರ ನಾವು ಅವನ ಜೀವನಾಡಿಯನ್ನೇ ಕೊಯ್ದುಬಿಡುತ್ತಿದ್ದೆವು. ಆಗ ಅದನ್ನು ತಡೆಯಬಲ್ಲವರು ಯಾರೂ ನಿಮ್ಮಲ್ಲಿ ಇಲ್ಲ.

ಅಲ್ಲಾಹನ ಈ ಆದೇಶದಿಂದ ಎರಡು ಮಾತುಗಳು ಸ್ಪಷ್ಟವಾಗುತ್ತವೆ. ಹಝ್ರತ್ ರಸೂಲುಲ್ಲಾಹ್(ಸ) ನುಬುವ್ವತ್ ದಾವೆಯ ನಂತರ 23 ವರ್ಷಗಳವರೆಗೆ ಜೀವಂತವಾಗಿದ್ದರು. ಅಂದ ಮೇಲೆ 23 ವರ್ಷಗಳ ಅವದಿ ಒಬ್ಬ ಸುಳ್ಳು ಪ್ರವಾದಿಗೆ ದೊರೆಯಲು ಸಾಧ್ಯವಿಲ್ಲ. ಹಾಗೇನಾದರೂ ಆದರೆ ಸುಳ್ಳು ಸತ್ಯದ ಅಂತರವೇ ಕಾಣದಂತಾಗುವುದು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ವಿಧಾನದಿಂದ ತನ್ನ ಸತ್ಯತೆ ಪ್ರಕಟಪಡಿಸಿದರು. ಅಲ್ಲಾಹನು ನನಗೆ ನೀಡಿದಂತಹ ಅವಧಿ ಯಾವ ಸುಳ್ಳವಾದಿಗೂ ನೀಡಲು ಸಾಧ್ಯವಿಲ್ಲ. ಆಗ ಹಾಫೀಝ್ ಮುಹಮ್ಮದ್ ಯೂಸೂಫ್ ನೆಹರ್ ಜಿಲ್ಲಾಧಿಕಾರಿ ಹೇಳಿದರು. ನಾನು ಅಂತಹ ಸುಳ್ಳು ಪ್ರವಾದಿಗಳ ಹೆಸರು ತೋರಿಸಬಲ್ಲೆನು. ಅವರು ನುಬುವ್ವತ್ತಿನ ಸುಳ್ಳು ವಾದ ಮಾಡಿದ್ದರು ಮತ್ತು ಅವರು 23 ವರ್ಷಗಳೇಕೆ ಅದಕ್ಕಿಂತ ಹೆಚ್ಚು ಸಮಯ ಜೀವಿತವಾಗಿದ್ದರು. ಆಗ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಪಂಥಾಹ್ವಾನ ನೀಡಿದರು. ಯಾರಾದರೂ ಅಂತಹ ಉದಾಹರಣೆ ಪ್ರಸ್ತುತಪಡಿಸಿದರೆ ಅವರಿಗೆ ಐದು ನೂರು ರೂಪಾಯಿಗಳ ನಗದು ಬಹುಮಾನ ನೀಡುವ ಭರವಸೆ ಕೊಟ್ಟರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಈ ವೈಭವಯುತ ಪಂಥಾಹ್ವಾನ ಕೇವಲ ಹಾಫೀಝ್ ಮುಹಮ್ಮದ್ ಸಾಹಿಬ್ ಅವರಿಗೆ ಮಾತ್ರ ನೀಡಲಿಲ್ಲ. ಬದಲು ಭಾರತದ ಎಲ್ಲ ಸುಪ್ರಸಿದ್ಧ ಮೌಲ್ವಿಗಳಿಗೆ ಆಹ್ವಾನಿಸಿದರು. ಅವರು 29 ಮೌಲ್ವಿಗಳ ಹೆಸರು ಸಮೇತ ತಮ್ಮ ಎದುರು ಬರಲು ಆಹ್ವಾನ ನೀಡಿ ಬರೆದರು. ಮುಂಬೈ ಕಲ್ಕತ್ತ ಮದ್ರಾಸ್‌ನ ಎಲ್ಲಾ ಮೌಲ್ವಿಗಳೇ, ದರ್ಗಾ ಪೀಠಾಧಿಪತಿಗಳೇ, ಭಾರತದ ಎಲ್ಲ ಶೇಖುಗಳೇ, ವಿದೇಶವಂತರೇ, ನ್ಯಾಯವಂತರ, ಭಯಭಕ್ತಿಯುಳ್ಳವರ ಮುಸಲ್ಮಾನರಿಗೆ ಕರೆ ನೀಡಿದರು. (ಝುಮೀಮ ತೋಹಫ ಗೊಲಡ್ವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–38) ಇದರಿಂದ ತಿಳಿಯಬಹುದು. ಈ ಪಂಥಾಹ್ವಾನ ಕೇವಲ ಹಾಫಿಝ್ ಮುಹಮ್ಮದ್ ಯೂಸೂಫ್ ಸಾಹಿಬ್ ಜಿಲ್ಲಾಧಿಕಾರಿ ನೆಹರ್ ಅವರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಬದಲು ಹಿಂದ್ ಪಾಕಿನ ಎಲ್ಲಾ ಮೌಲ್ವಿಗಳಿಗೆ ಸಂಬೋಧಿಸಿದ್ದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಪಂಥಾಹ್ವಾನ ಮತ್ತು ಅವರ ಸಮರ್ಥನೆ ನಾವು ಅವರದ್ದೇ ಶುಭ ಪದಗಳಲ್ಲಿ ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೆವೆ.

ಕೆಲ ಗಣ್ಯಾತಿ ಗಣ್ಯ ವ್ಯಕ್ತಿಗಳ ಸಮಕ್ಷಮ ಹಾಫೀಝ್ ಮುಹಮ್ಮದ್ ಯೂಸುಫ್ ಜಿಲ್ಲಾದಿಕಾರಿ ನೆಹರ್ ವಾದ ಮಂಡಿಸಿದನು. ನುಬುಅತ್ತಿನ ಸುಳ್ಳುವಾದಿಯು ಸಹ 23 ವರ್ಷ ಅಥವಾ ಅದಕ್ಕಿಂತ ಹೆಚ್ಚು ಸಮಯ ಜೀವಿತದಲ್ಲಿರಬಹುದಾಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೆನಪಿರಲಿ. ಹಾಫೀಝ್ ಮುಹಮ್ಮದ್ ಯೂಸೂಫ್ ಸಾಹಿಬ್ ಜಿಲ್ಲಾಧಿಕಾರಿ ನೆಹರ್ ತನ್ನ ಮೂಢ ಮತ್ತು ದಾರಿ ತಪ್ಪಿದ ಮೌಲ್ವಿಗಳ ಶಿಕ್ಷಣದಿಂದ ಲಾಹೋರಿನ ಒಂದು ಸಭೆಯಲ್ಲಿ ಮಿರ್ಝಾ ಖುದಾ ಬಕ್ಸ್ ಸಾಹಿಬ್, ಸಾಹಿಬ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್ ಮತ್ತು ಮಿಯಾ ಮಿರಾಜುದ್ದೀನ್ ಸಾಹಿಬ್ ಲಾಹೋರಿ ಹಾಗೂ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್, ಸೂಫೀ ಮುಹಮ್ಮದ್ ಅಲಿ clerk ಮಿಯಾ ಚುನ್ನು ಸಾಹೆಬ್ ಲಾಹೋರಿ, ಖಲೀಫ ರಹಬ್ ದೀನ್ ಸಾಹಿಬ್ ತಾಜಿರ್ ಲಾಹೋರಿ, ಶೇಖ್ ಯಾಖೂಬ್ ಅಲಿ ಸಾಹಿಬ್, ಸಂಪಾದಕರು ಅಲ್–ಹಕಮ್ ಪತ್ರಿಕೆ, ಹಕೀಮ್ ಮುಹಮ್ಮದ್ ಹುಸೇನ್ ಸಾಹಿಬ್ ಖುರೇಶಿ, ಹಕೀಮ್ ಮುಹಮ್ಮದ್ ಹುಸೇನ್ ಸಾಹಿಬ್ ತಾಜಿರ್ ಮರ್‌ಹಮ್ ಈಸಾ, ಮಿಯಾ ಚರಾಗ್ ದೀನ್ ಸಾಹಿಬ್ clerk ಮೌಲ್ವಿ ಯಾರ್ ಮುಹಮ್ಮದ್ ಸಾಹಿಬ್ ಹಾಜರಿದ್ದರು. ಬಹಳ ಒತ್ತು ನೀಡಿ ಈ ವಿವರ ಮಂಡಿಸಿದರು.

ಯಾವನೇ ನಬಿ ಅಥವಾ ರಸೂಲ್ ಅಥವಾ ಅಲ್ಲಾಹನಿಂದ ನಿಯುಕ್ತಗೊಂಡವನು ಸುಳ್ಳು ದಾವೆ ಹೂಡಿದರೆ ಮತ್ತು ಆ ಮೂಲಕ ಜನರಿಗೆ ದಾರಿ ತಪ್ಪಿದರೂ ಸಹ ಅಂತಹ ಸುಳ್ಳು ವಾದಿಗಳು 23 ವರ್ಷಗಳವರೆಗೆ ಅಥವಾ ಅದಕ್ಕಿಂತ ಹೆಚ್ಚು ಜೀವಿತದಲ್ಲಿರಬಹುದಾಗಿದೆ. ಅಂದರೆ ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳಿಯೂ ಅಷ್ಟು ವಯಸ್ಸು ಪಡೆಯುವುದು ಅದರ ಸತ್ಯತೆಗೆ ಸಾಕ್ಷಿ ಎಂದಾಗಲಾರದು ಮತ್ತು ಹೇಳಿದರು. ಅಂತಹ ಹಲವು ಜನರ ಹೆಸರುಗಳು ಉದಾಹರಣೆಗೆ ನೀಡಬಹುದಾಗಿದೆ. ಅವರು ನಬಿ ಅಥವಾ ರಸೂಲ್ ಅಥವಾ ಅಲ್ಲಾಹನಿಂದ ನಿಯುಕ್ತಿ ಪಡೆದ ದಾವೆ ಮಾಡಿದ್ದರು ಮತ್ತು 23 ವರ್ಷಗಳವರೆಗೆ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯವರೆಗೆ ಜನರಿಗೆ ಸಂದೇಶ ನೀಡುತ್ತಿದ್ದರು. ನಮ್ಮ ಮೇಲೆ ಅಲ್ಲಾಹನ ಗ್ರಂಥ ಅವತರಿಸಿದೆ ಹಾಗೆ ಅವರು ಸುಳ್ಳು ವಾದಿಗಳಾಗಿದ್ದರು.

ಹಾಫಿಝ್ ಸಾಹಿಬ್ ಅವರ ಈ ವಾದ ಸರಿ ಎಂದಾದರೆ ಮತ್ತೆ ಪವಿತ್ರ ಖುರ್‌ಆನ್ ತಪ್ಪು, ಮಹಾತ್ಮರುಗಳ, ವ್ಯಾಖ್ಯಾನಗಾರರುಗಳು ತಪ್ಪು ಎಂದಾಗುತ್ತದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದರಿಂದ ಈ ಕೆಳಗೆ ಕೊಟ್ಟಿರುವ ವಚನಗಳು ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ನೀಡಿರುವ ವಚನಗಳು ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ನೀಡಿರುವ ವಿವರಣೆ ಅವರು ಅಲ್ಲಾಹನಿಂದ ಅವತರಿಸುವರೆ ಇಲ್ಲ, ಸರಿ ಅಲ್ಲ ಅಂದ ಹಾಗಾಯಿತು. ಅಂದರೆ ಅಲ್ಲಾಹನು ಅದನ್ನು ಯಹೂದ್ಯರ ಮತ್ತು ಬಹುದೇವಾರಾಧಕರ ಮುಂದೆ ನ್ಯಾಯ ತೀರ್ಪು ಮಾಡಲು ನೀಡಿರುವ ಈ ವಿವರಣೆ ಸರ್ವತ: ವಿರೋಧ ಎಂದಾಯಿತು. ಅಂದ ಹಾಗೆ ಪೂರ್ವ ಮಹಾತ್ಮರುಗಳು, ವಿದ್ವಾಂಸರು ಕೇವಲ ತಮ್ಮ ಮೂರ್ಖತನದಿಂದ ಈ ಸಾಕ್ಷ್ಯವನ್ನು ವಿರೋಧಿಗಳ ಮುಂದೆ ಪ್ರಸ್ತಾಪಿಸಿದಂತಾಯಿತು. ಶರ ಹನಫಿ ವಿಶ್ವಾಸಗಳು, ಅಹಲೆ ಸುನ್ನತ್ ಅವರ ವಿಶ್ವಾಸಗಳು ಬಗ್ಗೆಯೂ ಒಂದು ಗ್ರಂಥದಲ್ಲಿದೆ. ಆ ಗ್ರಂಥದಲ್ಲೂ ಈ ಸಾಕ್ಷ್ಯವನ್ನು ಬರೆಯಲಾಗಿದೆ. ಮತ್ತು ಮೌಲ್ವಿಗಳು ಅದಕ್ಕೆ ಸಮ್ಮತಿ ವ್ಯಕ್ತಪಡಿಸಿದ್ದಾರೆ. ಖುರ್‌ಆನ್ ಅನ್ನು ವಕ್ರದೃಷ್ಟಿಯಿಂದ ನೋಡುವುದು ಅಥವಾ ಖುರ್‌ಆನ್‌ನ ವಚನ ತಿರಸ್ಕರಿಸುವುದು ಕುಫ್ರ್ ಆಗಿದೆ. ಯಾವ ಕಾರಣಕ್ಕೆ ಹಾಫಿಝ್ ಸಾಹಿಬ್, ಯಾವ ದ್ವೇಷ ಸಾಧನೆಗಾಗಿ ಈ ಮಾತನ್ನು ಎತ್ತಿಕೊಂಡಿದ್ದಾರೆ ತಿಳಿಯದು. ಮತ್ತೆ ಅವರು ಖುರ್‌ಆನ್‌ನ ಹಾಫಿಝ್ ಬೇರೆ ಆಗಿದ್ದಾರೆ. ಅದಾಗ್ಯೂ ಕೆಳಗೆ ವಿವರಿಸಿದ ವಚನಗಳನ್ನು ಮರೆತುಬಿಟ್ಟರು. ಅವು ಹೀಗಿವೆ. **ವಲೌ ತಖವ್ವಲ ಅಲೈನಾ ಬಅ್‌ಝಲ್ ಅಖಾವೀಲ್; ಲಅಖಝ್ನು ಮಿನ್‌ಹು ಬಿಲ್ ಯಮೀನ್; ಸುಮ್ಮ ಲಖತಅ್‌ನ ಮಿನ್‌ಹುಲ್ ವತೀನ್; ಫಮಾ ಮಿನ್‌ಕುಮ್ ಮಿನ್ ಅಹದಿನ್ ಅನ್‌ಹು ಹಾಜಿಝೀನ್;** ಸೂರತುಲ್ ಹಾಖ್ಖ ಭಾಗ–29 ಅದರ ಅನುವಾದ ಹೀಗಿದೆ. ಆತನು (ನಾವು ಅವತೀರ್ಣಗೊಳಿಸದ, ಕೆಲವು ಸುಳ್ಳು ಮಾತುಗಳನ್ನು ನಮ್ಮದೆಂದು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ತಖ್ವದ ಪ್ರಭಾವ ಇಹಲೋಕದಲ್ಲೇ ಮುತ್ತಖಿಯ ಮೇಲೆ ಉಂಟಾಗಲು ಶುರುವಾಗುತ್ತದೆ. ಇದು ಸಾಲದಂತಲ್ಲ, ಬದಲಾಗಿ ತಕ್ಷಣವೇ ಸಿಗುವ ನಗದು ಹಣದಂತಾಗಿದೆ. ಯಾವ ರೀತಿಯಲ್ಲಿ ವಿಷದ ಪ್ರಭಾವ ಮತ್ತು ಔಷಧಿಯ ಪ್ರಭಾವ ತಕ್ಷಣವೇ ದೇಹದಲ್ಲಿ ಉಂಟಾಗುತ್ತದೋ ಅದೇ ರೀತಿಯಲ್ಲಿ ತಖ್ವದ ಪ್ರಭಾವ ಕೂಡ ಆಗುತ್ತದೆ. *(ಹಝ್ರತ್ ಮಸೀಹ್ ಮೌಊದ್(ಅ))*

**ಪವಿತ್ರ ಮಾಸ ರಮಝಾನ್‌ನ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ, ಜಮಾಅತ್ತಿನ ಸದಸ್ಯರಿಗೆ ಶುದ್ಧ ತಖ್ವವನ್ನು ಸಾಧಿಸಲು ಸಲಹೆ ನೀಡಿದರು.**

**"ನಮ್ಮ ಬೋಧನೆಯ ಸಾರವೆಂದರೆ ಮನುಷ್ಯನು ತನ್ನ ಎಲ್ಲಾ ಶಕ್ತಿಯನ್ನು ಅಲ್ಲಾಹನ ಕಡೆಗೆ ನಿರ್ದೇಶಿಸಬೇಕು"**

**ಇಸ್ಲಾಮಿನ ಪರಿಪೂರ್ಣತೆಯು ತಖ್ವವಾಗಿದ್ದು ಅದು ರಕ್ಷಕತ್ವವನ್ನು ನೀಡುತ್ತದೆ, ಇದರಿಂದ ದೇವದೂತರು ಮಾತನಾಡುತ್ತಾರೆ, ಸರ್ವಶಕ್ತನಾದ ಅಲ್ಲಾಹನು ಒಳ್ಳೆಯ ಸುದ್ದಿಯನ್ನು ನೀಡುತ್ತಾನೆ.**

**ಅಜ್ಞಾನವು ನಿಜವಾದ ತಖ್ವದೊಂದಿಗೆ ಸಂಯೋಜಿಸಲಾಗುವುದಿಲ್ಲ, ನಿಜವಾದ ತಖ್ವದೊಂದಿಗೆ ಪ್ರಕಾಶ ಇರುತ್ತದೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–04–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನ ಅನುಗ್ರಹದಿಂದ ನಾವೀಗ ರಮಝಾನ್ ಮಾಸದಿಂದ ದಾಟಿಹೋಗುತ್ತಿದ್ದೇವೆ. ಅದರ ಸುಮಾರು ಇಪ್ಪತ್ತರಷ್ಟು ದಿನಗಳು ಮುಕ್ತಾಯಗೊಂಡಿವೆ. ಈ ತಿಂಗಳ ಪ್ರಯೋಜನಗಳಿಂದ ಸಾಧ್ಯವಾದಷ್ಟು ಅಧಿಕ ಪಾಲು ಪಡೆಯಲು ಪ್ರತಿಯೊಬ್ಬ ಸತ್ಯವಿಶ್ವಾಸಿ ಅಲ್ಲಾಹನ ಅನುಗ್ರಹದಿಂದ ಪ್ರಯತ್ನಿಸುತ್ತಾನೆ. ಅಲ್ಲಾಹನು ಉಪವಾಸ ಕಡ್ಡಾಯವೆಂಬ ಆದೇಶದ ಆರಂಭದಲ್ಲೇ ಉಪವಾಸದ ಉದ್ದೇಶವನ್ನು ಹೇಳಿರುವನು. ಅದೇನೆಂದರೆ, ನಾವು ದೇವಭಕ್ತಿಯನ್ನು ಕೈಗೊಳ್ಳಲಿಕ್ಕಾಗಿ ನಮ್ಮ ಮೇಲೆ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ.

ನಾವು ಉಪವಾಸದೊಂದಿಗೆ ನಮ್ಮ ದೇವಭಕ್ತಿಯ ಮಟ್ಟವನ್ನು ಕೂಡ ಉನ್ನತಗೊಳಿಸಿವಾಗ ಮತ್ತು ಪ್ರತಿಯೊಂದು ರೀತಿಯ ಕೆಡುಕುಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ಅಲ್ಲಾಹನ ಅಭಯದಲ್ಲಿ ಇರಲು ಪ್ರಯತ್ನಿಸುವಾಗ ಮಾತ್ರವೇ ನಮಗೆ ಉಪವಾಸದ ಅನುಗ್ರಹದಿಂದ ಪಾಲು ಪಡೆಯಲು ಸಾಧ್ಯ. ಉಪವಾಸ ಒಂದು ಗುರಾಣಿಯಾಗಿದೆ (ರಕ್ಷಾಕವಚವಾಗಿದೆ) ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. (ಸಹೀಹ್ ಬುಖಾರಿ, ಕಿತಾಬುತ್ತೌಹೀದ್, ಹದೀಸ್–7492) ನಾಮ ಮಾತ್ರದ ಉಪವಾಸವನ್ನು ಇರಿಸುವುದು ನಮಗೆ ಸಾಕೇ? ಸಹರೀ ಮತ್ತು ಇಫ್‌ತಾರಿ ಮಾಡುವುದೇ ಸಾಕೇ? ಸಹರೀ ಮತ್ತು ಇಫ್‌ತಾರಿ ಮಾಡಿದ ಮಾತ್ರಕ್ಕೆ ನಾವು ಉಪವಾಸದ ಗುರಾಣಿಯ ರಕ್ಷಣೆಯಲ್ಲಿ ಬರುವೆವೋ? ಬದಲಾಗಿ ಉಪವಾಸಕ್ಕೆ ಸಂಬಂಧಿಸಿದ ಕಾರ್ಯಗಳ ಕಡೆಗೂ ಗಮನಹರಿಸಬೇಕಾಗಿದೆ. ನಾನು ಈಗ ಹೇಳಿದಂತೆ ದೇವಭಕ್ತಿ ಕೈಗೊಳ್ಳುವುದು ಮುಖ್ಯ ಉದ್ದೇಶವಾಗಿದೆ ಎಂದು ಅಲ್ಲಾಹನು ಹೇಳಿರುವನು. ಆದ್ದರಿಂದ ನಾವು ನಮ್ಮ ಉಪವಾಸಗಳನ್ನು, ನಮ್ಮ ರಮಝಾನನ್ನು ಅಲ್ಲಾಹನಿಗಾಗಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಯಾವುದರ ಪ್ರತಿಫಲ ಸ್ವತಃ ಅಲ್ಲಾಹನಾಗಿರುವನೋ ಅದನ್ನು ಪಡೆಯುವಂತನ್ನಾಗಿ ಮಾಡಬೇಕಾದರೆ, ಅಲ್ಲಾಹನು ನಮ್ಮಿಂದ ಬಯಸುವಂತಹ ಮಟ್ಟಕ್ಕೆ ಉಪವಾಸವನ್ನು ತರಬೇಕಾಗುವುದು. ಅದಕ್ಕಾಗಿಯೇ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ.

ನಾವು ನಮ್ಮನ್ನು ಸ್ವತಃ ಮೂಅ್‌ಮಿನ್ ಮತ್ತು ಮುಸ್ಲಿಂ ಎಂದು ಹೇಳುತ್ತೇವೆ. ನಾವು ಹಝ್ರತ್ ಪೈಗಂಬರ್(ಸ)ರ ನಿರ್ದೇಶನಗಳನ್ನು ಪಾಲಿಸುತ್ತಾ, ಹಝ್ರತ್ ಪೈಗಂಬರ್(ಸ)ರೊಂದಿಗೆ ನಮಗೆ ಇರುವ ವಿಶ್ವಾಸವನ್ನು ಪರಿಪೂರ್ಣಗೊಳಿಸುತ್ತಾ, ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಬರಬೇಕಾದ ಮಸೀಹ್ ಮತ್ತು ಮಹ್‌ದಿಯು ಹಝ್ರತ್ ಗುಲಾಂ ಅಹ್ಮದ್ ಸಾಹಿಬ್‌ರ ರೂಪದಲ್ಲಿ ಬಂದಿರುವರು ಎಂಬ ಸಂಗತಿಯನ್ನು ಕೂಡ ನಾವು ಅಂಗೀಕರಿಸಿದ್ದೇವೆ ಮತ್ತು ಈಗ ಇಸ್ಲಾಂ ಧರ್ಮದ ಪುನರುಜ್ಜೀವನದ ಕೆಲಸ ಅಲ್ಲಾಹನ ವಾಗ್ದಾನದ ಪ್ರಕಾರ ಮಸೀಹ್ ಮತ್ತು ಮಹ್‌ದಿಯ ಕೈಗಳಿಂದಲೇ ನಡೆಯುವುದು ಎಂದು ನಂಬಿಕೊಂಡಿದ್ದೇವೆ. ಆದ್ದರಿಂದ ನಮ್ಮೊಳಗೆ ಇಸ್ಲಾಮಿನ ನೈಜವಾದ ಚೈತನ್ಯವನ್ನು ನೆಲೆನಿಲ್ಲಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ)ರಿಂದಲೇ ಮಾರ್ಗದರ್ಶನ ಪಡೆಯುವುದು ನಮ್ಮ ಕರ್ತವ್ಯವಾಗಿದೆ.

ದೇವಭಕ್ತಿಯ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಏನು ಹೇಳಿರುವರು ಎಂಬುದನ್ನು ನೋಡುವಾಗ ದೇವಭಕ್ತಿ ಏನು ಎಂಬ ಈ ವಿಷಯದ ಕುರಿತು ಕೂಡ ನಮಗೆ ಅರಿವು ಲಭಿಸುತ್ತದೆ. ನಾವು ಮುಸ್ಲಿಮರಾಗಿದ್ದೇವೆ, ನಾವು ಸತ್ಯವಿಶ್ವಾಸಿಗಳಲ್ಲಿ ಸೇರಿದವರಾಗಿದ್ದೇವೆ ಎಂದು ನಾವು ವಾದಿಸುತ್ತೇವೆ ಎಂದು ನಾನು ಹೇಳಿದ್ದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಹೇಳುತ್ತಾರೆ: ಹಾಗಾದರೆ ಕೇಳಿರಿ, ಸತ್ಯವಿಶ್ವಾಸದ ಮೊದಲ ಹಂತವು ಮನುಷ್ಯನು ದೇವಭಕ್ತಿಯನ್ನು ಕೈಗೊಳ್ಳಬೇಕು ಎಂದಾಗಿದೆ. ತಖ್ವಾ ಎಂದರೇನು?

ಇದರ ಉತ್ತರವೇನೆಂದರೆ, ಪ್ರತಿಯೊಂದು ರೀತಿಯ ಕೆಡುಕುಗಳಿಂದ ಸ್ವತಃ ರಕ್ಷಣೆ ಹೊಂದುವುದು. ಇದು ಒಂದು ಮಾಮೂಲಿ ಸಂಗತಿಯಲ್ಲವೆಂದು ಪರಿಶೋಧನೆ ನಡೆಸಿದರೆ ಗೊತ್ತಾಗುವುದು. ನಾವು ತಖ್ವಾದ ಹಕ್ಕನ್ನು ಈಡೇರಿಸುತ್ತಾ ಅಲ್ಲಾಹನಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸುತ್ತಿದ್ದೇವೆಯೇ? ನಾವು ದೇವಭಕ್ತಿಯ ಮೇಲೆ ನಡೆಯುತ್ತಾ ಅಲ್ಲಾಹನ ಸೃಷ್ಟಿಗಳಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಈಡೇರಿಸುತ್ತಿದ್ದೇವೆಯೇ ಎಂಬ ಸಂಗತಿಯು ನಾವು ನಮ್ಮ ಮೌಲ್ಯಮಾಪಣ ಮಾಡಿದರೆ ಗೊತ್ತಾಗುವುದು. ಈ ಸಂಗತಿಗಳ ಪರಿಪೂರ್ಣ ಅರಿವು ಲಭಿಸುವ ತನಕ ತಖ್ವಾ ಏನು ಎಂಬುವುದನ್ನು ತಿಳಿಯಲು ಸಾಧ್ಯವಲ್ಲ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ತಿಳುವಳಿಕೆ ಗಳಿಸುವುದು ಆವಶ್ಯಕ. ಏಕೆಂದರೆ ಅರಿವು ಇಲ್ಲದೆ ಯಾವುದೇ ಸಂಗತಿಯನ್ನು ಗಳಿಸಲು ಸಾಧ್ಯವೇ ಅಲ್ಲ. ಅದನ್ನು ಒಬ್ಬ ವ್ಯಕ್ತಿಗೆ ಪಡೆಯಲು ಸಾಧ್ಯವಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳೇನು? ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳೇನು? ಯಾವ ಸಂಗತಿಗಳನ್ನು ಮಾಡುವುದರಿಂದ ಅಲ್ಲಾಹನು ತಡೆದಿದ್ದಾನೆ? ಯಾವ ಸಂಗತಿಗಳನ್ನು ಮಾಡಲು ಅಲ್ಲಾಹನು ಆದೇಶಿಸಿದ್ದಾನೆ ಎಂಬ ಅರಿವು ಲಭಿಸಲಿಕ್ಕಾಗಿ ಪದೇ ಪದೇ ಪವಿತ್ರ ಖುರ್‌ಆನನ್ನು ಓದಬೇಕು ಮತ್ತು ಪವಿತ್ರ ಖುರ್‌ಆನನ್ನು ಪಠಿಸುವಾಗ ಕೆಟ್ಟ ಕೆಲಸಗಳ ವಿವರವನ್ನು ಬರೆಯುತ್ತಾ ಹೋಗಬೇಕು. ಅನಂತರ ಅಲ್ಲಾಹನ ಕೃಪೆ ಮತ್ತು ಸಹಾಯದಿಂದ ಆ ಕೆಡುಕುಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು.

ಈ ರಮಝಾನಿನಲ್ಲಿ ನಾವು ಪವಿತ್ರ ಖುರ್‌ಆನ್ ಸಹ ಓದುತ್ತಿದ್ದೇವೆ. ಸಾಮಾನ್ಯವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದರ ಕಡೆಗೆ ಹೆಚ್ಚಿನ ಗಮನವಿರುತ್ತದೆ. ಆಗ ಅದರಲ್ಲಿ ಮಾಡಲು ಮತ್ತು ಮಾಡದಿರಲು ಹೇಳಿದ ಸಂಗತಿಗಳ ಕಡೆಗೆ ಗಮನಿಸಬೇಕು ಎಂಬ ಯೋಚನೆಯೊಂದಿಗೆ ಓದಬೇಕು ಹಾಗೂ ಕೆಟ್ಟ ಕೆಲಸಗಳಿಂದ ತಡೆದು ನಿಲ್ಲಲು ಮತ್ತು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರಯತ್ನಿಸಬೇಕು. ಪವಿತ್ರ ಖುರ್‌ಆನಿನ ಆರಂಭದಿಂದ ಕೊನೆಯ ತನಕ ಮಾಡಬೇಕಾದ ಮತ್ತು ಮಾಡಬಾರದ ಸಂಗತಿಗಳ

ಹಾಗೂ ಅಲ್ಲಾಹನ ಆದೇಶಗಳ ವಿವರಣೆ ಇದೆ. ಆದ್ದರಿಂದ ನಾವು ಈ ಸಂಗತಿಗಳನ್ನು ನೋಡಬೇಕಾಗಿದೆ. ಅವುಗಳ ಬಗ್ಗೆ ಆಲೋಚಿಸಬೇಕು ಮತ್ತು ಅವುಗಳ ಪ್ರಕಾರ ನಡೆಯಬೇಕು. ಇದೇ ಒಬ್ಬ ಸತ್ಯವಿಶ್ವಾಸಿಯ ಲಕ್ಷಣವಾಗಿದೆ. ಮನುಷ್ಯನು ಮುತ್ತಖಿ ಆಗುವ ತನಕ ಅವನ ಆರಾಧನೆಗಳು ಮತ್ತು ದುಆಗಳು ಸ್ವೀಕಾರದ ರೂಪವನ್ನು ಪಡೆಯುವುದಿಲ್ಲವೆಂಬ ಸಂಗತಿಯನ್ನು ಹಝ್ರತ್ ಮಸೀಹ್ ಮೌಊದ್(ಅ) ಒತ್ತಿ ಹೇಳಿರುವರು. ಏಕೆಂದರೆ, **ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್** ಎಂದು ಅಲ್ಲಾಹನು ಹೇಳಿರುವನು. (ಸೂರಃ ಮಾಇದ: 28) ಎಂದರೆ, ಅಲ್ಲಾಹನು ಮುತ್ತಖಿಗಳ ಆರಾಧನೆಗಳನ್ನು ಮಾತ್ರ ಸ್ವೀಕಾರ ಮಾಡುತ್ತಾನೆ. ಇದು ಸತ್ಯವಾದ ಸಂಗತಿಯಾಗಿದೆ. ನಮಾಝ್ ಮತ್ತು ಉಪವಾಸ ಕೂಡ ದೇವಭಕ್ತಿಯುಳ್ಳವರದ್ದು ಮಾತ್ರ ಸ್ವೀಕಾರವಾಗುತ್ತದೆ. ಆರಾಧನೆಗಳ ಸ್ವೀಕಾರ ಮತ್ತು ಅದರ ಅರ್ಥವೇನು? ಅದರ ಉತ್ತರವೇನೆಂದರೆ, ನಮಾಝ್ ಸ್ವೀಕಾರವಾಯಿತು ಎಂದು ನಾವು ಹೇಳುವಾಗ ಅದರ ತಾತ್ಪರ್ಯವೇನೆಂದರೆ, ನಮಾಝಿನ ಪ್ರಭಾವಗಳು ಮತ್ತು ಅನುಗ್ರಹಗಳು ನಮಾಝ್ ನಿರ್ವಹಿಸುವವನ ಮೇಲೆ ಉಂಟಾಯಿತು ಎಂದಾಗಿದೆ. ಎಲ್ಲಿಯ ವರೆಗೆ ಆ ಅನುಗ್ರಹಗಳು ಮತ್ತು ಪ್ರಭಾವಗಳು ಉಂಟಾಗುವುದಿಲ್ಲವೋ ಅಲ್ಲಿಯ ವರೆಗೂ ಅದು ವ್ಯರ್ಥ ಪ್ರಯತ್ನ ಮಾತ್ರವಾಗಿದೆ. ನಮ್ಮ ರಮಝಾನ್, ನಮ್ಮ ಉಪವಾಸಗಳು ನಮ್ಮನ್ನು ಈ ಮಟ್ಟಕ್ಕೆ ಕೊಂಡುಹೋಗಲು ಪ್ರಯತ್ನಿಸುತ್ತಿವೆಯೇ ಎಂದು ನಾವು ನೋಡಬೇಕಾಗಿದೆ. ನ್ಯೂನತೆಗಳು ಮತ್ತು ಕೆಡುಕುಗಳಲ್ಲಿ ಬಿದ್ದುಕೊಂಡೇ ಇರುವುದಾದರೆ, ಆ ನಮಾಝ್‌ಗಳು ಅವನಗೆ ಯಾವ ಪ್ರಯೋಜನ ನೀಡಿತು ಎಂದು ನೀವೇ ಹೇಳಿರಿ. ಅವನ ನಮಾಝಿನಿಂದ ಅವನು ಮುಳುಗಿದ್ದ ಕೆಡುಕುಗಳು ಮತ್ತು ಪಾಪಗಳು ಕಡಿಮೆಯಾಗಬೇಕಾಗಿತ್ತು. ನಮಾಝ್ ಅವನಗೆ ಒಂದು ಉತ್ತಮ ಮಾರ್ಗವಾಗಿದೆ. ಆದ್ದರಿಂದ ಸತ್ಯವಿಶ್ವಾಸಿಯಾಗಲು ಬಯಸುವ ಒಬ್ಬ ಮನುಷ್ಯನಗೆ ಮೊದಲ ಹಂತ ಮತ್ತು ಕಷ್ಟಕರವಾದ ಸಂಗತಿಯು ಕೆಟ್ಟ ಕೆಲಸಗಳಿಂದ ದೂರವಿರುವುದೇ ಆಗಿದೆ. ಇದರ ಹೆಸರು ತಖ್ವಾ ಎಂದಾಗಿದೆ. (ಮಲ್‌ಫೂಝಾತ್, ಸಂಪುಟ–8, ಪುಟ–374–377, 1984 ಆವೃತಿ)

ಒಟ್ಟಿನಲ್ಲಿ ನಮ್ಮ ಆರಾಧನೆಗಳು, ನಮ್ಮ ಉಪವಾಸಗಳು, ನಮ್ಮ ಪವಿತ್ರ ಖುರ್‌ಆನ್ ಪಾರಾಯಣವು ನಮ್ಮೊಳಗೆ ಕರ್ಮಪರವಾದ ಬದಲಾವಣೆಗಳನ್ನು ಮಾಡುವುದಿಲ್ಲವೆಂದಾದರೆ, ಉಪವಾಸಗಳ ಉದ್ದೇಶವಾದ ತಖ್ವ ಗಳಿಕೆಯನ್ನು ಗಳಿಸಲು ಪ್ರಯತ್ನಿಸಿಲ್ಲವೆಂದಾದರೆ, ನಾವು ನಮ್ಮ ಉಪವಾಸಗಳ ಉದ್ದೇಶವನ್ನು ಈಡೇರಿಸಿಲ್ಲ ಎಂದಾಯಿತು.

ಉಪವಾಸ ಗುರಾಣಿಯಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವುದರ ಬಗ್ಗೆ ಮಾತುಕತೆಯಂತು ನಾವು ನಡೆಸಿದ್ದೇವೆ. ಆದರೆ ನಾವು ಆ ಗುರಾಣಿಯನ್ನು ಉಪಯೋಗಿಸುವ ರೀತಿಯನ್ನು ಕಲಿಯಲು ಪ್ರಯತ್ನಿಸಿಲ್ಲ. ನಾವು ಸಹರೀ ಮತ್ತು ಇಫ್‌ತಾರಿಯ ಏರ್ಪಾಡನ್ನಂತು ಮಾಡಿದ್ದೇವೆ. ಆದರೆ ಸಹರೀ ಮತ್ತು ಇಫ್‌ತಾರಿ ಮಾಡುವುದರ ಉದ್ದೇಶವನ್ನು ನಾವು ಈಡೇರಿಸಿಲ್ಲ. ನಾವು ಪೂರ್ತಿ ದಿನವನ್ನು ತಿನ್ನದೇ ಕುಡಿಯದೇ ಕಳೆದಿದ್ದೇವೆ. ಆದರೆ ಹಸಿವಿನ ಉದ್ದೇಶವನ್ನು ಈಡೇರಿಸಲಿಲ್ಲ. ಆ ಉದ್ದೇಶವು ತಖ್ವ ಲಭಿಸುವಾಗ ಈಡೇರುತ್ತದೆ. ನಮ್ಮಲ್ಲಿ ಉಂಟಾಗಬೇಕಾದ ತಖ್ವಾ ಉಂಟಾಗಿದೆಯೋ ಇಲ್ಲವೇ ಎಂಬುದನ್ನು ನಾವು ಅವಲೋಕಿಸಬೇಕಾಗಿದೆ.

ನೈಜ ತಖ್ವಾ ಏನು ಮತ್ತು ಯಾವ ರೀತಿಯ ತಖ್ವವನ್ನು ಹಝ್ರತ್ ಮಸೀಹ್ ಮೌಊದ್(ಅ) ನಮ್ಮಲ್ಲಿ ಉಂಟುಮಾಡಲು ಬಯಸುತ್ತಿದ್ದರು ಎಂಬುದರ ಕಡೆಗೆ ಮಾರ್ಗದರ್ಶನ ನೀಡುವ ತಖ್ವದ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಹೆಚ್ಚಿನ ಕೆಲವು ಉಲ್ಲೇಖಗಳನ್ನು ನಾನು ಮುಂದಿರಿಸುತ್ತೇನೆ. ಈ ಕುರಿತು ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು:

ಮನುಷ್ಯನನ್ನು ತೊಳೆಯುವ ಮತ್ತು ಅವನನ್ನು ಶುಚಿಗೊಳಿಸುವ ಹಾಗೂ ಯಾವುದಕ್ಕಾಗಿ ಪ್ರವಾದಿಗಳು ಬರುತ್ತಾರೋ ಆ ತಖ್ವಾ ಲೋಕದಿಂದ ಹೊರಟುಹೋಗಿದೆ. **ಖದ್ ಅಫ್‌ಲಹ ಮನ್ ಝಕ್ಕಾಹ** ಎಂಬುದರ ಸಾಕ್ಷಾತ್ಕಾರ ಎಂಬಂತೆ ಅಪರೂಪಕ್ಕೆ ಕೆಲವರು ಇರಬಹುದು. ಎಂದರೆ, ಯಾರು ಅದನ್ನು ಪರಿಶುದ್ಧಗೊಳಿಸದನೋ ಅವನು ತನ್ನ ಉದ್ದೇಶವನ್ನು ಗಳಿಸಿದನು ಎಂಬ ಸ್ಥಾನವನ್ನು ಪಡೆದವರು ವಿರಳ. ಪರಿಶುದ್ಧಿ ಮತ್ತು ಪವಿತ್ರತೆ ಬಹಳ ಉತ್ತಮ ಸಂಗತಿಯಾಗಿದೆ. ಮನುಷ್ಯನು ಪವಿತ್ರನು ಮತ್ತು ಪರಿಶುದ್ಧನಾದರೆ ದೇವದೂತರು ಅವನ ಹಸ್ತಲಾಘವ ಮಾಡುತ್ತಾರೆ. ಜನರೊಳಗೆ ಅದರ ಬೆಲೆಯಿಲ್ಲ ಮತ್ತು ಅನುಮತನೀಯವಾದ ಮಾರ್ಗಗಳಿಂದ ಲಭಿಸುವುದರ ಅಭಿರುಚಿಗಳ ಕುರಿತು ಅವರಿಗೆ ಅರಿವಿಲ್ಲ. ಸಂಪತ್ತು ಲಭಿಸಲಿಕ್ಕಾಗಿ ಕಳ್ಳನು ಕಳ್ಳತನ ಮಾಡುತ್ತಾನೆ. ಆದರೆ ಅವನು ತಾಳ್ಮೆವಹಿಸಿದರೆ, ಅಲ್ಲಾಹನು ಅವನನ್ನು ಬೇರೆ ಮಾರ್ಗದಿಂದ ಸಿರಿವಂತನನ್ನಾಗಿ ಮಾಡುವನು. ಇಲ್ಲಿ ಬಾಹ್ಯವಾದ ಕಳ್ಳತನ ಬಗ್ಗೆ ಮಾತ್ರ ಹೇಳಲಾಗಿಲ್ಲ. ಸರಿಯಲ್ಲದ ತಮ್ಮ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳು ಕೂಡ ಇದೇ ಕೂಟಕ್ಕೆ ಸೇರುತ್ತಾರೆ. ಮನುಷ್ಯನ ಹೃದಯದಿಂದ ಸತ್ಯವಿಶ್ವಾಸ ಹೊರಟುಹೋಗುವಾಗಲೇ ಈ ರೀತಿಯ ಅಪ್ರಿಯ ಚಟುವಟಿಕೆಗಳು ನಡೆಯುತ್ತವೆ. ಅದೇ ರೀತಿಯಲ್ಲಿ ವ್ಯಭಿಚಾರಿ ವ್ಯಭಿಚಾರ ಮಾಡುತ್ತಾನೆ. ಆದರೆ ಅವನು ತಾಳ್ಮೆವಹಿಸಿದರೆ, ಅಲ್ಲಾಹನ ಸಂಪ್ರೀತಿ ಲಭಿಸುವಂತಹ ಬೇರೆ ಮಾರ್ಗಗಳಿಂದ ಅಲ್ಲಾಹನು ಮನುಷ್ಯನ ಬಯಕೆಯನ್ನು ಈಡೇರಿಸುವನು. ಹದೀಸಿನಲ್ಲಿ ಹೀಗೆ ಬಂದಿದೆ: ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಕಳ್ಳತನ ಮಾಡುವುದಿಲ್ಲ. ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ವ್ಯಭಿಚಾರ ಮಾಡುವುದಿಲ್ಲ. ಎಂದರೆ, ಸತ್ಯವಿಶ್ವಾಸ ಹೃದಯದಿಂದ ಹೊರಟುಹೋದ ಸ್ಥಿತಿಯಲ್ಲೇ ಇಂತಹ ಕೃತ್ಯಗಳನ್ನು ಮನುಷ್ಯನು ಎಸಗುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಂದು ಆಡಿನ ನೇರ ಮುಂದಾಗಿ ಒಂದು ಸಿಂಹ ನಿಂತರೆ ಅದಕ್ಕೆ ಹುಲ್ಲು ತಿನ್ನಲು ಕೂಡ ಸಾಧ್ಯವಾಗುವುದಿಲ್ಲ. ಹೀಗಿರುವಾಗ ಆಡಿಗೆ ಇರುವಷ್ಟು ಈಮಾನ್ ಕೂಡ ಜನರಿಗೆ ಇಲ್ಲವೇ? ಪಾಪಗಳನ್ನು ಮತ್ತು ಕೆಡುಕುಗಳನ್ನು ಮನುಷ್ಯನು ಮಾಡುವಾಗ ಅಲ್ಲಾಹನು ನಮ್ಮನ್ನು ಸದಾ ನೋಡುತ್ತಿದ್ದಾನೆ ಎಂಬ ಭಾವನೆ ಇರಬೇಕು. ಯಥಾರ್ಥ ಬೇರು ಮತ್ತು ಉದ್ದೇಶ ತಖ್ವ ಗಳಿಕೆಯಾಗಿದೆ. ಯಾರಿಗೆ ಅದು ಲಭಿಸುತ್ತದೋ ಅವನು ಎಲ್ಲವನ್ನು ಗಳಿಸಲು ಸಾಧ್ಯ. ಅದಿಲ್ಲದೇ ಮನುಷ್ಯನಿಗೆ ಹಿರಿಯ ಮತ್ತು ಕಿರಿಯ ಪಾಪಗಳಿಂದ ರಕ್ಷಣೆ ಪಡೆಯಲು ಸಾಧ್ಯವಲ್ಲ. ಸರ್ಕಾರಗಳ ಅಪ್ಪಣೆಗಳಿಂದ ಮನುಷ್ಯನು ಪಾಪಗಳಿಂದ ರಕ್ಷಣೆ ಪಡೆಯಲಾರ. ಅಧಿಕಾರಿಗಳನ್ನು ಹೆದರಲು ಅವರು ನಮ್ಮ ಜೊತೆಜೊತೆಗೆ ಇರುವುದಿಲ್ಲ. ಮನುಷ್ಯನು ಸ್ವತಃ ತನ್ನನ್ನು ಒಬ್ಬಂಟಿಯೆಂದು ಭಾವಿಸಿ ಪಾಪಗಳನ್ನು ಮಾಡುತ್ತಾನೆ. ಇಲ್ಲದಿದ್ದರೆ ಅವನು ಅದನ್ನು ಎಂದಿಗೂ ಮಾಡಲಾರನು. ಅವನು ತನ್ನನ್ನು ಒಬ್ಬಂಟಿಗನೆಂದು ಭಾವಿಸುವಾಗ ಅವನು ನಾಸ್ತಿಕನಾಗಿರುತ್ತಾನೆ. ಸತ್ಯವಿಶ್ವಾಸ ಅವನೊಳಗೆ ಕಿಂಚಿತ್ತೂ ಇರುವುದಿಲ್ಲ. ಅಲ್ಲಾಹನ ವಿಶ್ವಾಸ ಅವನ ಹೃದಯದಿಂದ ಹೊರಟುಹೋಗಿರುತ್ತದೆ. ಅಲ್ಲಾಹನು ನೋಡುತ್ತಿದ್ದಾನೆ ಎಂಬ ಅರಿವು ಅವನಿಗೆ ಇದ್ದರೆ ಮನುಷ್ಯನು ಎಂದಿಗೂ ಪಾಪಗಳನ್ನು ಮಾಡಲಾರನು. ತಖ್ವದಿಂದ ಎಲ್ಲವೂ ಲಭಿಸುವುದು. ಪವಿತ್ರ ಖುರ್‌ಆನ್ ತನ್ನ ಆರಂಭವನ್ನು ಅದರಿಂದಲೇ ಮಾಡಿದೆ. **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್** (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ.) ಎಂಬುದರ ಉದ್ದೇಶವು ತಖ್ವ ಆಗಿದೆ. ಎಂದರೆ, ಮನುಷ್ಯನು ಸತ್ಕರ್ಮಗಳನ್ನು ಮಾಡಿಕೊಂಡು ಅವುಗಳನ್ನು ತನ್ನ ಸಾಮರ್ಥ್ಯದಿಂದ ಮಾಡಿದ್ದು ಎಂದು ಹೇಳಲು ದೇವಭಯದ ಕಾರಣದಿಂದ ಧೈರ್ಯಪಡುವುದಿಲ್ಲ ಮತ್ತು ಅಲ್ಲಾಹನಿಂದಲೇ ಮುಂದಿನ ಸತ್ಕರ್ಮಗಳಿಗಾಗಿ ಸಹಾಯವನ್ನು ಬೇಡುತ್ತಾನೆ. ಸತ್ಕರ್ಮಗಳನ್ನು ಮಾಡಿದ್ದರೂ ಅದು ತನ್ನ ಯಾವುದೋ ಶ್ರೇಷ್ಠತೆ ಎಂದು ಭಾವಿಸಲಾರನು. ನನ್ನ ಹೃದಯ ಪರಿಶುದ್ಧವೆಂದೋ ನಾನು ಒಳಿತಿನ ಬಹಳ ಉನ್ನತ ಮಟ್ಟವನ್ನು ತಲುಪಿದ್ದೇನೆ ಎಂದು ಭಾವಿಸಲಾರನು. ಬದಲಾಗಿ ಅದು ಅಲ್ಲಾಹನ ಅನುಗ್ರಹವೆಂದೂ ಅವನೇ ನನಗೆ ಸತ್ಕರ್ಮಗಳನ್ನು ಮಾಡಲು, ನಮಾಝ್‌ಗಳನ್ನು ಅನುಷ್ಠಿಸಲು, ದುಆಗಳನ್ನು ಮಾಡಲು ಸೌಭಾಗ್ಯ ನೀಡಿರುವನು ಎಂದು ಮನವರಿಕೆ ಮಾಡಿಕೊಳ್ಳುವನು. ಪವಿತ್ರ ಖುರ್‌ಆನಿನ ಎರಡನೇ ಅಧ್ಯಾಯ ಕೂಡ **ಹುದಲ್ಲಿಲ್ ಮುತ್ತಖೀನ್** ಎಂಬ ವಚನದಿಂದ ಆರಂಭವಾಗುತ್ತದೆ. ಮನುಷ್ಯನು ಮುತ್ತಖಿಯಾಗುವಾಗ ಮಾತ್ರ ಅವನ ನಮಾಝ್, ಉಪವಾಸ ಮುಂತಾದ ಎಲ್ಲವೂ ಸ್ವೀಕಾರವಾಗುತ್ತವೆ. ಆಗ ಪಾಪದ ಕಡೆಗೆ ಎಳೆಯುವ ಎಲ್ಲ ಸಂಗತಿಗಳನ್ನು ಅಲ್ಲಾಹನು ದೂರಮಾಡುತ್ತಾನೆ. ತಖ್ವವಿರುವವನಗೆ, ಪತ್ನಿಯ ಆವಶ್ಯಕತೆಯಿದ್ದರೆ, ಅಲ್ಲಾಹನು ಅವನಿಗೆ ಪತ್ನಿಯನ್ನು ದಯಪಾಲಿಸುತ್ತಾನೆ. ಮದ್ದಿನ ಆವಶ್ಯಕತೆಯಿದ್ದರೆ ಮದ್ದನ್ನು ಒದಗಿಸುತ್ತಾನೆ. ಯಾವುದರ ಆವಶ್ಯಕತೆಯಿದೆಯೋ ಅದನ್ನು ನೀಡುತ್ತಾನೆ. ಅವನು ಯೋಚಿಸಿ ಕೂಡ ಇಲ್ಲದ ಮಾರ್ಗಗಳಿಂದ ಅವನ ದಿನನಿತ್ಯದ ಆವಶ್ಯಕತೆಗಳನ್ನು ಪೂರೈಸಿ ಕೊಡುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮತ್ತೊಂದು ವಚನ ಪವಿತ್ರ ಖುರ್‌ಆನಿನಲ್ಲಿದೆ. **ಇನ್ನಲ್ಲಝೀನ ಖಾಲು ರಬ್ಬುನಲ್ಲಾಹ ಸುಮ್ಮಸ್ತಖಾಮೂ ತತನಝ್ಝಲೂ ಅಲೈಹಿಮುಲ್ ಮಲಾಇಕತು ಅಲ್ಲಾ ತಖಾಫೂ ವಲಾ ತಹ್‌ಝನೂ** (ಹಾಮ್ ಮೀಮ್ ಅಸ್ಸಜದಃ: 31) ಅರ್ಥ: ಯಾರು 'ಅಲ್ಲಾಹನು ನಮ್ಮ ಪ್ರಭು' ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ಎಂದರೆ, ಅವರ ಮೇಲೆ ಭೂಕಂಪಗಳ ಸ್ಥಿತಿಯುಂಟಾಯಿತು, ಬಿರುಗಾಳಿ ಎದ್ದಿತ್ತು. ಆದರೆ ಅಲ್ಲಾಹನೊಂದಿಗೆ ಅವರು ಮಾಡಿದ ವಾಗ್ದಾನದಿಂದ

ಅವರು ಹಿಂದೆ ಸರಿಯಲಿಲ್ಲ. ನಿಷ್ಠೆಯಿಂದ ಅಲ್ಲಾಹನೊಂದಿಗೆ ಸಂಬಂಧವನ್ನು ಇರಿಸಿದರು. ಸತ್ಯವಿಶ್ವಾಸವನ್ನು ಒಂದು ಬಾರಿ ಸ್ವೀಕಾರ ಮಾಡಿದ ನಂತರ ಸತ್ಯವಿಶ್ವಾಸದಲ್ಲಿ ಸುದೃಢಗೊಳ್ಳುತ್ತಾ ಹೋದರು. ಸಣ್ಣ ಸಣ್ಣ ಸಂಗತಿಗಳು ಬರುವಾಗಲೇ ಕೆಲವರ ಸತ್ಯವಿಶ್ವಾಸ ಅಲುಗಾಡಲು ಶುರುವಾಗುತ್ತದೆ. ಆದರೆ ಇವರು ಅಚಂಚಲರಾಗಿರುತ್ತಾರೆ.

ಅನಂತರ ಅಲ್ಲಾಹನು ಮುಂದೆ ಹೇಳುತ್ತಾನೆ: ಈ ಸತ್ಯವಿಶ್ವಾಸಿಗಳು ಹಾಗೆ ಮಾಡಿದಾಗ, ಸತ್ಯಸಂಧತೆ ಮತ್ತು ನಿಷ್ಠತೆಯನ್ನು ತೋರಿಸಿದಾಗ ಅದಕ್ಕೆ ಲಭಿಸಿದ ಪ್ರತಿಫಲವೇನೆಂದರೆ, **ತತನಝ್ಝುಲು ಅಲೈಹಿಮುಲ್ ಮಲಾಇಕ.** ಎಂದರೆ, ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ. ಇಲ್ಲಿ ಹೇಳಿರುವ ಸ್ವರ್ಗದಿಂದ ಈ ಲೋಕದ ಸ್ವರ್ಗವನ್ನು ಉದ್ದೇಶಿಸಲಾಗಿದೆ. ಪವಿತ್ರ ಖುರ್‌ಆನಿನಲ್ಲಿ ಇದರ ಬಗ್ಗೆ ಹೀಗೆ ಹೇಳಲಾಗಿದೆ. **ಅವಲಿಮನ್ ಮಖಾಮ ರಬ್ಬಿಹೀ ಜನ್ನತಾನ್**. ಎಂದರೆ, ಅಲ್ಲಾಹನ ಸ್ಥಾನವನ್ನು ಭಯಪಡುವವರಿಗೆ ಎರಡು ಸ್ವರ್ಗಗಳಿವೆ. **ನಹ್‌ನು ಔಲಿಯಾಉಕುಂ ಫಿಲ್ ಹಯಾತುದ್ದುನ್‌ಯಾ ವಫಿಲ್‌ಆಖಿರ**. ಎಂದರೆ, ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ನಾವು ನಿಮ್ಮ ಸ್ನೇಹಿತ ಮತ್ತು ಸಂರಕ್ಷಕರಾಗುವೆವು. (ಮಲ್‌ಫೂಝಾತ್, ಸಂಪುಟ–4, ಪುಟ–251–253, 1984 ಆವೃತಿ)

ಒಟ್ಟಿನಲ್ಲಿ, ಯಾರ ಸ್ನೇಹಿತ ಮತ್ತು ಸಂರಕ್ಷಕ ಅಲ್ಲಾಹನಾಗುತ್ತಾನೋ ಅವನು ಬಹಳ ಸೌಭಾಗ್ಯಶಾಲಿ. ಅವನು ತನ್ನ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಮಾಡುವವನಾಗಿರುತ್ತಾನೆ.

ಅನಂತರ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯ ವಿಜಯಗಳಲ್ಲಿ ಇರುವ ಅಂತರವೇನೆಂಬುದರ ಬಗ್ಗೆ ವಿವರಣೆ ನೀಡುತ್ತಾ ಹಾಗೂ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿ ತನ್ನ ವಿಜಯವನ್ನು ಹೇಗೆ ನೋಡುತ್ತಾನೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ತತ್ವವನ್ನು ಸದಾ ಮುಂದಿರಿಸಬೇಕು. ಅದೇನೆಂದರೆ, ಸತ್ಯವಿಶ್ವಾಸಿಗೆ ಯಾವುದಾದರೂ ಯಶಸ್ಸು ಲಭಿಸುವಾಗ ಅವನು ಲಜ್ಜಿತನಾಗುತ್ತಾನೆ. ಅವನೇಕೆ ನಾಚಿಕೆ ಹೊಂದುತ್ತಾನೆ? ಏಕೆಂದರೆ, ನಾನು ಅದಕ್ಕೆ ಅರ್ಹನಾಗಿರಲಿಲ್ಲ; ಅಲ್ಲಾಹನು ತನ್ನ ಕೃಪೆಯಿಂದಲೇ ಎಲ್ಲವನ್ನು ನೀಡಿರುವನು ಎಂಬ ಭಾವನೆ ಅವನಲ್ಲಿ ಉಂಟಾಗುತ್ತದೆ. ತನ್ನ ಯಾವುದೇ ಶ್ರೇಷ್ಠತೆ, ತನ್ನ ಯಾವುದೇ ಅರಿವಿನ ಕಾರಣದಿಂದ, ತನ್ನ ಬುದ್ಧಿ, ತನ್ನ ಸಂಪತ್ತು ಅಥವಾ ತನ್ನ ದೈಹಿಕ ಸಾಮರ್ಥ್ಯದ ಕಾರಣದಿಂದ ಅಲ್ಲ ಬದಲಾಗಿ ಎಲ್ಲವೂ ಅಲ್ಲಾಹನ ಕೃಪೆಯಿಂದಲೇ ಉಂಟಾಗಿದೆ ಎಂದು ಅವನು ಮನವರಿಕೆ ಮಾಡುತ್ತಾನೆ. ಈ ಭಾವನೆ ಅವನಲ್ಲಿ ಮೂಡಿಬರುವಾಗ ಅವನು ಅಲ್ಲಾಹನ ಸ್ತುತಿ ಮಾಡುತ್ತಾನೆ. ಈ ರೀತಿಯಾಗಿ ಅವನು ತನ್ನ ಹೆಜ್ಜೆಯನ್ನು ಮುಂದಿಡುತ್ತಾನೆ. ಪ್ರತಿಯೊಂದು ವಿಪತ್ತಿನ ಘಟ್ಟದಲ್ಲೂ ಸ್ಥಿರಚಿತ್ತನಾಗಿ ಸತ್ಯವಿಶ್ವಾಸವನ್ನು ಗಳಿಸುತ್ತಾನೆ. ನೆನಪಿಡಿರಿ, ಸತ್ಯನಿಷೇಧಿಯ ವಿಜಯವು ಅವನನ್ನು ದುರ್ಮಾರ್ಗದೆಡೆಗೆ ಕೊಂಡುಹೋಗುತ್ತದೆ. ಸತ್ಯವಿಶ್ವಾಸಿಯ ವಿಜಯದಿಂದ ಅವನಿಗಾಗಿ ಅನುಗ್ರಹಗಳ ಬಾಗಿಲುಗಳು ತೆರೆಯುತ್ತವೆ. ಸತ್ಯನಿಷೇಧಿಯು ಪ್ರತಿಯೊಂದು ಸಂಗತಿ ಲಭಿಸುವಾಗ ತನ್ನ ಬಗ್ಗೆ ಹೆಮ್ಮೆಪಡುತ್ತಾನೆ. ಅವನ ಹಿರಿಮೆಗೆ ಅವನೇ ಕಾರಣವೆಂದು ಭಾವಿಸುತ್ತಾನೆ. ಆದ್ದರಿಂದ ಅವನು ದುರ್ಮಾರ್ಗದಲ್ಲಿ ಬೀಳುತ್ತಾನೆ. ಆದರೆ ನಿಜವಾದ ಸತ್ಯವಿಶ್ವಾಸಿಯು ಪ್ರತಿಯೊಂದು ಸಂಗತಿಯನ್ನು ಅಲ್ಲಾಹನ ಕೃಪೆಯೆಂದು ಸೂಚಿಸುವಾಗ ಅವನ ಮೇಲೆ ವರದಾನಗಳ ಬಾಗಿಲು ತೆರೆಯಲ್ಪಡುತ್ತದೆ. ಸತ್ಯನಿಷೇಧಿಯ ವಿಜಯವು ಅವನನ್ನು ನಾಶದ ಕಡೆಗೆ ಕೊಂಡುಹೋಗಲು ಕಾರಣವೇನೆಂದರೆ, ಅವನು ದೇವನ ಕಡೆಗೆ ಮರಳುವುದಿಲ್ಲ. ಬದಲಾಗಿ ತನ್ನ ಪರಿಶ್ರಮ, ತನ್ನ ಬುದ್ಧಿ ಮತ್ತು ಸಾಮರ್ಥ್ಯವನ್ನೇ ದೇವನನ್ನಾಗಿ ಮಾಡುತ್ತಾನೆ. ಆದರೆ ಸತ್ಯವಿಶ್ವಾಸಿಯು ಅಲ್ಲಾಹನ ಕಡೆಗೆ ಬಾಗಿಕೊಂಡು ಅಲ್ಲಾಹನೊಂದಿಗೆ ಹೊಸದಾದ ಒಂದು ಪರಿಚಯವನ್ನು ಮಾಡಿಕೊಳ್ಳುತ್ತಾನೆ. ಈ ರೀತಿಯಾಗಿ ಪ್ರತಿಯೊಂದು ವಿಜಯದ ನಂತರ ಅಲ್ಲಾಹನ ಜೊತೆಗೆ ಅವನ ಒಂದು ಹೊಸ ವ್ಯವಹಾರ ಆರಂಭವಾಗುತ್ತದೆ. ಅವನಲ್ಲಿ ಬದಲಾವಣೆ ಉಂಟಾಗಲು ಶುರುವಾಗುತ್ತದೆ. **ಇನ್ನಲ್ಲಾಹ ಮಅಲ್ಲದೀನತ್ತಖೌ**. ಎಂದರೆ, ಮುತ್ತಖಿಯಾದವನ ಜೊತೆಗೆ ಅಲ್ಲಾಹನು ಇರುತ್ತಾನೆ.

ನೆನಪಿಡಿರಿ, ಪವಿತ್ರ ಖುರ್‌ಆನಿನಲ್ಲಿ ತಖ್ವಾ ಎಂಬ ಪದ ಅನೇಕ ಬಾರಿ ಬಂದಿದೆ. ನೂರಕ್ಕಿಂತಲೂ ಹೆಚ್ಚು ಸಲ ಬಂದಿದೆ. ಈ ವಚನದಲ್ಲಿ ಅದಕ್ಕಿಂತ ಮುಂಚಿನ ಪದವಾದ ಮಅ ಎಂಬ ಪದದೊಂದಿಗೆ ಇದು ಬಂದಿದೆ. ಎಂದರೆ ಯಾರು ದೇವನಿಗೆ ಪ್ರಾಮುಖ್ಯತೆ ಮತ್ತು ಆದ್ಯತೆಯನ್ನು ಕೊಡುತ್ತಾನೋ ಅವನಿಗೆ ಅಲ್ಲಾಹನು ಪ್ರಾಮುಖ್ಯತೆ ಮತ್ತು ಆದ್ಯತೆಯನ್ನು ಕೊಡುತ್ತಾನೆ. ಲೋಕದ ಎಲ್ಲ ರೀತಿಯ ಅಪಮಾನ ಮತ್ತು ನಿಂದ್ಯಾವಸ್ಥೆಯಿಂದ ಅಲ್ಲಾಹನು ಅವನನ್ನು ಸಂರಕ್ಷಿಸುತ್ತಾನೆ. ನನ್ನ ವಿಶ್ವಾಸವೇನೆಂದರೆ, ಮನುಷ್ಯನು ಎಲ್ಲ ರೀತಿಯ ನಿಂದನೆ ಮತ್ತು ಕಾಠಿಣ್ಯದಿಂದ ರಕ್ಷಣೆ ಪಡೆಯಲು ಬಯಸುವನಾದರೆ, ಅದಕ್ಕಿರುವ ಒಂದೇ ಮಾರ್ಗ ಮುತ್ತಖಿಯಾಗುವುದಾಗಿದೆ. ಹಾಗಾದರೆ, ಅವನಿಗೆ ಯಾವುದೇ ಸಂಗತಿಯ ಕೊರತೆಯಿರುವುದಿಲ್ಲ. ಒಟ್ಟಿನಲ್ಲಿ ಸತ್ಯವಿಶ್ವಾಸಿಯ ವಿಜಯವು ಅವನನ್ನು ಮುಂದಕ್ಕೆ ಕೊಂಡು ಹೋಗುವುದು ಮತ್ತು ಅವನು ಒಂದೇ ಜಾಗದಲ್ಲಿ ತಂಗಿ ಇರುವುದಿಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–155–156, 1984 ಆವೃತಿ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತಖ್ವಾದ ಪ್ರಭಾವ ಇಹಲೋಕದಲ್ಲೇ ಮುತ್ತಖಿಯ ಮೇಲೆ ಉಂಟಾಗಲು ಶುರುವಾಗುತ್ತದೆ. ಇದು ಸಾಲದಂತಲ್ಲ, ಬದಲಾಗಿ ತಕ್ಷಣವೇ ಸಿಗುವ ನಗದು ಹಣದಂತಾಗಿದೆ. ಯಾವ ರೀತಿಯಲ್ಲಿ ವಿಷದ ಪ್ರಭಾವ ಮತ್ತು ಔಷಧಿಯ ಪ್ರಭಾವ ತಕ್ಷಣವೇ ದೇಹದಲ್ಲಿ ಉಂಟಾಗುತ್ತದೋ ಅದೇ ರೀತಿಯಲ್ಲಿ ತಖ್ವಾದ ಪ್ರಭಾವ ಕೂಡ ಆಗುತ್ತದೆ. (ಮಲ್‌ಫೂಝಾತ್, ಸಂಪುಟ–2, ಪುಟ–324, 1984 ಆವೃತಿ)

ಒಟ್ಟಿನಲ್ಲಿ, ಸತ್ಕರ್ಮಗಳನ್ನು ಮಾಡಿಯೂ ಆರಾಧನೆಗಳನ್ನು ಮಾಡಿಯೂ ಒಳಿತುಗಳನ್ನು ಮಾಡಿಯೂ ಮನುಷ್ಯನ ಅವಸ್ಥೆಯಲ್ಲಿ ಪ್ರಭಾವ ಉಂಟಾಗುತ್ತಿಲ್ಲವೆಂದಾದರೆ, ಅದು ಚಿಂತನೀಯವಾದ ಸಂಗತಿಯಾಗಿದೆ. ಆರಾಧನೆ ಮತ್ತು ಸತ್ಕರ್ಮಗಳು ಸ್ವೀಕಾರಗೊಂಡಿವೆ ಎಂದು ಹೇಗೆ ಗೊತ್ತಾಗುವುದು ಎಂಬಿತ್ಯಾದಿ ಅನೇಕ ಸವಾಲುಗಳನ್ನು ಜನರು ಬರೆದು ಕಳುಹಿಸುತ್ತಾರೆ. ಅದಕ್ಕಿರುವ ಉತ್ತರವೇನೆಂದರೆ, ಒಳಿತುಗಳನ್ನು ಮಾಡುವ ಕಡೆಗೆ ಹೆಚ್ಚಿನ ಗಮನ ಉಂಟಾಗುತ್ತಿದ್ದರೆ, ಅಲ್ಲಾಹನ ಕಡೆಗೆ ಗಮನ ಹೆಚ್ಚಾಗಿ ಉಂಟಾಗುತ್ತಿದ್ದರೆ, ಮನುಷ್ಯನು ಆ ಕೆಲಸವನ್ನು ಅಲ್ಲಾಹನಗಾಗಿ ಮಾಡುತ್ತಿದ್ದಾನೆ ಎಂದು ಅರ್ಥ ಮತ್ತು ಅಲ್ಲಾಹನು ಅದರಲ್ಲಿ ಅನುಗ್ರಹವನ್ನು ಸುರಿಸುತ್ತಾನೆ.

ತಖ್ವಾದ ಮಾರ್ಗಗಳನ್ನು ಬೊಟ್ಟುಮಾಡಿ ತೋರಿಸುತ್ತಾ, ಅವುಗಳ ಕಡೆಗೆ ಗಮನಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನ ಎಲ್ಲ ತರದ ಆಧ್ಯಾತ್ಮಿಕ ಸೌಂದರ್ಯವು ಅವನು ದೇವಭಕ್ತಿಯ ಎಲ್ಲ ಸೂಕ್ಷ್ಮ ಮಾರ್ಗಗಳಲ್ಲಿ ಹೆಜ್ಜೆ ಹಾಕುವಾಗ ಆಗಿದೆ. ತಖ್ವಾದ ಸೂಕ್ಷ್ಮವಾದ ಮಾರ್ಗಗಳು, ಸೌಂದರ್ಯದ ಸೂಕ್ಷ್ಮವಾದ ನಕಾಶೆ ಮತ್ತು ಸುಂದರವಾದ ರೂಪ ಏನಾಗಿವೆ? ಆಧ್ಯಾತ್ಮಿಕವಾಗಿ ಅದರಲ್ಲಿ ಒಂದು ಸೌಂದರ್ಯವಿದೆ. ಅಲ್ಲಾಹನು ನಮಗೆ ನೀಡಿದ ಸಂಗತಿಗಳ ಸಂರಕ್ಷಣೆ ಮತ್ತು ವಿಶ್ವಾಸಪರವಾದ ಪ್ರತಿಜ್ಞೆಗಳನ್ನು ಸಾಧ್ಯವಾದಷ್ಟು ಕಾಪಾಡುವುದು ಮತ್ತು ಈಡೇರಿಸುವುದು. ಅದೇನೆಂದರೆ, ತಲೆಯಿಂದ ಕಾಲಿನ ವರೆಗೆ ಎಷ್ಟೆಲ್ಲ ಸಾಮರ್ಥ್ಯಗಳು ಮತ್ತು ಅಂಗಾಂಗಗಳು ಇವೆಯೋ ಅವುಗಳನ್ನು ಸರಿಯಾಗಿ ಮತ್ತು ಅನುಮತನೀಯವಾಗಿ ಉಪಯೋಗಿಸುವುದು, ಬಾಹ್ಯವಾಗಿ ನೋಡುವುದಾದರೆ, ಕಣ್ಣುಗಳು, ಕಿವಿಗಳು, ಕಾಲುಗಳು, ಕೈಗಳು ಮತ್ತಿತರ ಅಂಗಾಂಗಳು ಹಾಗೂ ಆಂತರಿಕವಾದ ಹೃದಯ ಮತ್ತು ಇತರ ಶಕ್ತಿ ಸಾಮರ್ಥ್ಯಗಳು ಮತ್ತು ನೈತಿಕಗುಣಗಳು; ಇವನ್ನೆಲ್ಲ ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಸರಿಯಾದ ಆವಶ್ಯಕತೆಯಿರುವ ಸಂದರ್ಭದಲ್ಲಿ ಉಪಯೋಗಿಸುವುದು ಮತ್ತು ಅನುಮತನೀಯವಲ್ಲದ ಕೆಲಸಗಳು ಮತ್ತು ಜಾಗಗಳಿಂದ ತಡೆದುನಿಲ್ಲುವುದು ಹಾಗು ಕೆಡುಕಿನ ರಹಸ್ಯವಾದ ದಾಳಿಗಳ ಬಗ್ಗೆ ಜಾಗರೂಕನಾಗಿರುವುದು. ಅಲ್ಲಾಹನು ನೀಡಿದ ವಸ್ತುಗಳ ಮತ್ತು ಸಾಮರ್ಥ್ಯಗಳ ಸಂರಕ್ಷಣೆ ಇದೇ ಆಗಿದೆ. ಇವೇ ನಾವು ಅಲ್ಲಾಹನೊಂದಿಗೆ ನಾವು ಮಾಡಿರುವ ವಿಶ್ವಾಸಪರವಾದ ಪ್ರತಿಜ್ಞೆಗಳಾಗಿವೆ. ಎಂದರೆ, ಕಣ್ಣುಗಳನ್ನು ಕೂಡ ಸರಿಯಾದ ಕೆಲಸಕ್ಕಾಗಿ ಉಪಯೋಗಿಸುವುದು, ದುರ್ನೋಟದಿಂದ ದೂರವಿರುವುದು, ಅವುಗಳನ್ನು ತಪ್ಪು ಕೆಲಸಗಳಿಂದ ಸಂರಕ್ಷಿಸುವುದು. ಅದೇ ರೀತಿಯಲ್ಲಿ, ಕಿವಿಗಳನ್ನು ಕೆಟ್ಟ ಮಾತುಗಳು ಆಲಿಸುವುದರಿಂದ ರಕ್ಷಿಸುವುದು, ಕೈಕಾಲುಗಳಿಂದ ಒಳ್ಳೆಯ ಕೃತ್ಯಗಳನ್ನು ಮಾಡುವುದು. ಹೃದಯದಲ್ಲಿರುವ ಕೆಟ್ಟ ಚಿಂತೆಗಳನ್ನು, ಭಾವನೆಗಳನ್ನು ಹೊರಗೆ ಹಾಕುವುದು ಇತ್ಯಾದಿ. ಇದಕ್ಕಾಗಿ ಹೆಚ್ಚು ಹೆಚ್ಚಾಗಿ ಇಸ್ತಿಗ್‌ಫಾರ್, ಅಲ್ಲಾಹನೊಡನೆ ಪಶ್ಚಾತ್ತಾಪಪಡುತ್ತಾ ಕ್ಷಮೆಯಾಚನೆ ಮಾಡಬೇಕು.

ಅದೇ ರೀತಿಯಲ್ಲಿ ಇತರ ಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಿಸಬೇಕು. ನಮ್ಮ ನೈತಿಕಗುಣ ಮತ್ತು ಸ್ವಭಾವಗುಣಗಳನ್ನು ಉನ್ನತ ಮಟ್ಟಕ್ಕೆ ತಲುಪಿಸಬೇಕು. ಮನುಷ್ಯನು ಅಲ್ಲಾಹನೊಡನೆ ಮಾಡುವ ವಿಶ್ವಾಸಪರವಾದ ಪ್ರತಿಜ್ಞೆಗಳು ಇವೇ ಆಗಿವೆ. ಅವುಗಳನ್ನೆಲ್ಲ ಈಡೇರಿಸಬೇಕು. ಅದಲ್ಲದೇ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳ ಬಗ್ಗೆಯೂ ಗಮನವಿರಿಸಬೇಕು. ದಾಸರೊಡನೆ ಮಾಡಬೇಕಾದ ಕರ್ತವ್ಯಗಳನ್ನು ದೃಷ್ಟಿಯಲ್ಲಿರಿಸಬೇಕು. ಮೇಲೆ ಹೇಳಿದ ಸಂಗತಿಗಳು ನಮ್ಮ ಸ್ವಂತಕ್ಕಾಗಿವೆ. ಅದರ ನಂತರ ಸೃಷ್ಟಿಗಳ ಹಕ್ಕುಗಳನ್ನು ಕೂಡ ಈಡೇರಿಸಬೇಕು. ಇದೇ ಆ ಮಾರ್ಗಗಳಾಗಿವೆ. ಇವುಗಳೊಂದಿಗೆ ಮನುಷ್ಯನ ಎಲ್ಲ ಆಧ್ಯಾತ್ಮಿಕ ಸೌಂದರ್ಯ ಸೇರಿಕೊಂಡಿದೆ.

ಎಂದರೆ, ಮನುಷ್ಯನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಈಡೇರಿಸಲ್ಪಟ್ಟರೆ ಮನುಷ್ಯನಲ್ಲಿ ಆಧ್ಯಾತ್ಮಿಕವಾದ ಸೌಂದರ್ಯ ಉಂಟಾಗುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ದೇವಭಕ್ತಿಯನ್ನು, (ತಖ್ವವನ್ನು) ವಸ್ತ್ರ ಅಥವಾ ಬಟ್ಟೆ ಎಂದು ಹೇಳಿದ್ದಾನೆ. **ಲಿಬಾಸುತ್ತಖ್ವ** ಎಂಬುದು ಪವಿತ್ರ ಖುರ್‌ಆನ್ ಉಪಯೋಗಿಸಿದ ಪದವಾಗಿದೆ. ದೇವಭಕ್ತಿಯ ಉಡಿಗೆ. ಆಧ್ಯಾತ್ಮಿಕವಾದ ಸೌಂದರ್ಯವು ದೇವಭಕ್ತಿಯಿಂದಲೇ ಉಂಟಾಗುತ್ತದೆ ಎಂಬುವುದನ್ನು ಇದು ಸೂಚಿಸುತ್ತದೆ. ತಖ್ವ ಏನೆಂದರೆ, ಮನುಷ್ಯನು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅಲ್ಲಾಹನು ನೀಡಿದ ವಸ್ತುಗಳನ್ನು ಮತ್ತು ಸಾಮರ್ಥ್ಯಗಳನ್ನು ಸರಿಯಾಗಿ ಸಂರಕ್ಷಿಸುವುದು, ಅವನೊಂದಿಗೆ ಮಾಡಿದ ವಿಶ್ವಾಸಪರವಾದ ಪ್ರತಿಜ್ಞೆಗಳನ್ನು ಪಾಲಿಸುವುದು ಆಗಿದೆ. ಅದೇ ರೀತಿಯಲ್ಲಿ ಸೃಷ್ಟಿಗಳೊಂದಿಗೆ ಈಡೇರಿಸಬೇಕಾದ ಎಲ್ಲ ಅಮಾನತ್ತುಗಳನ್ನು ಮತ್ತು ಪ್ರತಿಜ್ಞೆಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಕಾಪಾಡುವುದು. ಎಂದರೆ ಅದರ ಸೂಕ್ಷ್ಮವಾದ ಮತ್ತು ಸಣ್ಣದಾದ ಭಾಗಗಳನ್ನು ಕೂಡ ಸಾಧ್ಯವಾಗುವಷ್ಟರ ಮಟ್ಟಿಗೆ ಈಡೇರಿಸುವುದು. ಎಂದರೆ, ಆರಾಧನೆಗಳ ಕುರಿತು ಮತ್ತು ಸ್ವತಃ ಸುಧಾರಣೆ ಮಾಡುವುದರ ಕುರಿತು ಅಲ್ಲಾಹನ ಆಜ್ಞೆಗಳ ಹಾಗೂ ಜನರೊಡನೆ ಮಾಡಬೇಕಾದ ಕರ್ತವ್ಯಗಳ ಅತಿ ಸಣ್ಣ ಮತ್ತು ಸೂಕ್ಷ್ಮವಾದ ವಿಷಯಗಳ ಕಡೆಗೂ ಗಮನಹರಿಸಿ ಅವುಗಳನ್ನು ಈಡೇರಿಸಲು ಪ್ರಯತ್ನಿಸುವುದು.

(ಝಮೀಮ ಬರಾಹೀನೆ ಅಹ್ಮದೀಯ, ಭಾಗ-5, ರೂಹಾನಿ ಖಝಾಈನ್, ಸಂಪುಟ-21, ಪುಟ-209-210)

ಆರಾಧನೆಗಳ ಕುರಿತು ಮತ್ತು ಸ್ವತಃ ಸುಧಾರಣೆ ಮಾಡುವುದರ ಕುರಿತು ಹಾಗೂ ಜನರ ಕರ್ತವ್ಯಗಳನ್ನು ಈಡೇರಿಸುವುದರ ಬಗ್ಗೆ ಅಲ್ಲಾಹನ ಆಜ್ಞೆಗಳ ಅತಿಸೂಕ್ಷ್ಮವಾದ ಮತ್ತು ಸಣ್ಣದಾದ ಸಂಗತಿಗಳ ಬಗ್ಗೆ ಗಮನವಿಟ್ಟು ಅವುಗಳನ್ನು ಈಡೇರಿಸಲು ಪ್ರಯತ್ನಿಸುವುದು. ಎಲ್ಲಿಯ ತನಕ ಮನುಷ್ಯನು ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ದಾಸನಿಗೆ ಸಲ್ಲಬೇಕಾದ ಕರ್ತವ್ಯಗಳ ಅತಿಸೂಕ್ಷ್ಮವಾದ ವಿಷಯಗಳ ಕುರಿತು ಗಮನಹರಿಸಿ ಅವುಗಳನ್ನು ಮಾಡಲು ಪ್ರಯತ್ನಿಸುವುದಿಲ್ಲವೋ ಮನುಷ್ಯನು ತಖ್ವದ ಮಟ್ಟವನ್ನು ಗಳಿಸಲು ಸಾಧ್ಯವಲ್ಲ. ಇದು ನಾವು ನೆನಪಿಡಬೇಕಾದ ಅತಿಸೂಕ್ಷ್ಮವಾದ ಅಂಶವಾಗಿದೆ. ಸೃಷ್ಟಿಗಳ ಸೇವೆ ಮತ್ತು ಕರ್ತವ್ಯಗಳನ್ನು ಈಡೇರಿಸುವುದಿಲ್ಲವೆಂದಾದರೆ, ಕೇವಲ ಆರಾಧನೆಯಿಂದ ಯಾವುದೇ ಪ್ರಯೋಜನವಿಲ್ಲ. ಅದೇ ರೀತಿಯಲ್ಲಿ ಕೇವಲ ಸೃಷ್ಟಿಗಳ ಸೇವೆಗಳನ್ನು ಮತ್ತು ಕರ್ತವ್ಯಗಳನ್ನು ಈಡೇರಿಸಿ ಅಲ್ಲಾಹನನ್ನು ಮರೆತುಬಿಡುವುದಾದರೆ, ಅದರಿಂದಲೂ ಪ್ರಯೋಜನವಿಲ್ಲ. ನಾವು ದಾಸರ ಹಕ್ಕುಗಳನ್ನು ಈಡೇರಿಸುತ್ತಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಇದು ಕೂಡ ನಮ್ಮನ್ನು ತಖ್ವದಲ್ಲಿ ನಡೆಯುವವರನ್ನಾಗಿ ಮಾಡಲಿಕ್ಕಿಲ್ಲ. ಒಬ್ಬ ನಿಜವಾದ ಸತ್ಯವಿಶ್ವಾಸಿಯು ಎರಡೂ, ಎಂದರೆ, ದೇವನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದು ಅವಶ್ಯಕ.

ನವೀನಾಚಾರಗಳು ಹರಡುತ್ತಿರುವುದರ ಬಗ್ಗೆ ಮತ್ತು ದೇವಭಕ್ತಿಯಿಂದ ದೂರವಿರುವುದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಾವಿರಾರು ವಿಧಗಳ ನವೀನಾಚಾರಗಳು ಮತ್ತು ಕೆಟ್ಟ ಸಂಪ್ರದಾಯಗಳು ತನ್ನದಾದ ರೀತಿಯಲ್ಲಿ ಪ್ರತಿಯೊಂದು ಪಂಗಡ ಮತ್ತು ಗುಂಪುಗಳಲ್ಲಿ ಉಂಟಾಗಿವೆ. ಮನುಷ್ಯನ ನೈಜ ಉದ್ದೇಶ ಮತ್ತು ಗುರಿಯಾಗಿರುವ ತಖ್ವ ಮತ್ತು ಪರಿಶುದ್ಧಿಯು, ಯಾವ ತಖ್ವಗಾಗಿ ಪ್ರವಾದಿತ್ವದ ಹೃದಯಕ್ಕಲ್ಲದೇ ಬೇರೆ ಯಾರಿಗೂ ಸಹಿಸಲು ಸಾಧ್ಯವಿಲ್ಲದಷ್ಟು ಅಪಾಯಕರವಾದ ವಿಪತ್ತುಗಳನ್ನು ಮತ್ತು ಕಷ್ಟತೆಗಳನ್ನು ಹಝ್ರತ್ ಪೈಗಂಬರ್(ಸ) ಸಹಿಸಿದ್ದರೋ, ಆ ತಖ್ವ ಇಂದು ಲೋಕದಿಂದ ಕಾಣೆಯಾಗಿ ಬಿಟ್ಟಿದೆ. ಸೆರೆಮನೆಗಳಿಗೆ ಹೋಗಿ ನೋಡಿರಿ. ಅಪರಾಧಿಗಳಲ್ಲಿ ಹೆಚ್ಚಿನ ಸಂಖ್ಯೆ ಯಾರದ್ದು ಎಂದು. ಅಪರಾಧಿಗಳಲ್ಲಿ ಮುಸ್ಲಿಮರೇ ಹೆಚ್ಚಾಗಿರುವರು. ಘಾನಾದಲ್ಲಿ ನಮ್ಮ ಓರ್ವ ಮಂತ್ರಿ ಇದ್ದರು. ನಾನು ಮೊದಲು ಹೇಳಿದಹಾಗೆ ನಮ್ಮ ಒಂದು ಸಭೆ ನಡೆಸುತ್ತಿತ್ತು ಆಗ ಅವರು ಹೇಳಿದರು ನಮ್ಮ ಜೈಲುಗಳಲ್ಲಿ ಮುಸ್ಲಿಮರು ಹೆಚ್ಚು ಇದ್ದಾರೆ. ಅವರು ಹೇಳಿದರು, "ನಾನು ಅಹ್ಮದಿಯಾಗಿದ್ದೇನೆ ಮತ್ತು ಈ ಮುಸ್ಲಿಮರಲ್ಲಿ ಯಾರೂ ಅಹ್ಮದಿಯರಿಲ್ಲ ಅಥವಾ ಅಹ್ಮದಿಯರಿದ್ದರು ಅವರ ಸಂಖ್ಯೆ ತೀರ ಕಡಿಮೆ ಇರುವುದು ಎಂದು ನಾನು ಚೆಲೆಂಜ್ ಮಾಡಿ ಹೇಳುತ್ತೇನೆ. ತದನಂತರ ಇದರ ಬಗ್ಗೆ ಪರಿಶೀಲಿಸಿದಾಗ ಅವರ ಮಾತು ಸರಿಯಾಗಿದೆ ಎಂದು ಖಚಿತವಾಯಿತು. ಆದ್ದರಿಂದ ಇದು ನಿಜವಾದ ನಂಬಿಕೆಯುಳ್ಳ, ನಿಜವಾದ ಅಹ್ಮದಿಯ ಸಂಕೇತವಾಗಿದೆ ಮತ್ತು ಅದು ನಂತರ ತಬ್‌ಲೀಗ್‌ಗೆ ಉತ್ತಮ ಸಾಧನವಾಗುತ್ತದೆ. ನಾವು ಈ ವಿಷಯವನ್ನು ನಮ್ಮ ಮುಂದೆ ಇರಿಸಿದರೆ ಮತ್ತು ಪ್ರತಿಯೊಂದು ವಿಷಯದಲ್ಲೂ, ಪ್ರತಿಯೊಂದು ಕ್ರಿಯೆಯಲ್ಲಿ, ನಮ್ಮ ವ್ಯವಹಾರದಲ್ಲಿ, ನಮ್ಮ ಉದ್ಯೋಗಗಳಲ್ಲಿ, ನಮ್ಮ ದೈನಂದಿನ ಜನರೊಂದಿಗೆ ವ್ಯವಹರಿಸುವಾಗ, ನಾವು ನಮ್ಮ ಉನ್ನತ ನೈತಿಕತೆಯನ್ನು ತೋರಿಸುವವರಾಗಬೇಕು, ನಮ್ಮ ಆರಾಧನೆಯ ಗುಣಮಟ್ಟವನ್ನು ಹೆಚ್ಚಿಸುವವರಾಗಬೇಕು. ಹೃದಯದಲ್ಲಿ ತಖ್ವವನ್ನು ಹುಟ್ಟುಹಾಕಲು ಪ್ರಯತ್ನಿಸುವವರಾಗಬೇಕು, ತಮ್ಮ ಹೃದಯದಲ್ಲಿ ಅಲ್ಲಾಹನ ಭಯವನ್ನು ಇಟ್ಟುಕೊಳ್ಳುವವರಾಗಬೇಕು, ನಂತರ ಅದು ನಮ್ಮ ಸುಧಾರಣೆಗೆ ಕಾರಣವಾಗುವುದು, ಅದು ಉಪದೇಶದ ಮೌನ ಸಾಧನವೂ ಆಗುತ್ತದೆ.

ತದನಂತರ ಅವರು ಮುಂದೆ ಹೇಳುತ್ತಾರೆ: ವ್ಯಭಿಚಾರ, ಶರಾಬುಸೇವನೆ, ಹಕ್ಕುಗಳನ್ನು ದೋಚುವುದು ಮತ್ತು ಇತರ ಅಪರಾಧಗಳು ಎಷ್ಟು ಹೆಚ್ಚಾಗಿವೆ ಎಂದರೆ, ದೇವನೇ ಇಲ್ಲವೆಂದು ಭಾವಿಸಲಾಗಿದೆ. ಜನಾಂಗದ ವಿವಿಧ ವಿಭಾಗಗಳ ದೋಷಗಳನ್ನು ವಿಸ್ತೃತವಾಗಿ ಚರ್ಚಿಸಿದರೆ ಬೃಹತ್ ಗ್ರಂಥವೇ ಸಿದ್ಧವಾಗುತ್ತದೆ. ಪ್ರತಿಯೊಬ್ಬ ಬುದ್ಧಿವಂತ ಮತ್ತು ಚಿಂತನಶೀಲ ವ್ಯಕ್ತಿಯು ರಾಷ್ಟ್ರದ ವಿವಿಧ ಜನರ ಸ್ಥಿತಿಯನ್ನು ನೋಡುತ್ತಾನೆ ಮತ್ತು ನಿಜವಾದ ಕಾರಣ ಮತ್ತು ಗೌರವದ ಮೂಲವಾಗಿರುವ ಪವಿತ್ರ ಖುರ್‌ಆನ್‌ಗೆ ಕಾರಣವಾದ ತಖ್ವ ಇಂದು ಅಸ್ತಿತ್ವದಲ್ಲಿಲ್ಲ ಎಂದು ಸರಿಯಾದ ಮತ್ತು ಖಚಿತವಾದ ತೀರ್ಮಾನಕ್ಕೆ ಬರುತ್ತಾನೆ. ಪವಿತ್ರ ಖುರ್‌ಆನ್ ತಖ್ವವನ್ನು ಸೃಷ್ಟಿಸಲು ಬಯಸಿದೆ. ಅದು ಪವಿತ್ರ ಖುರ್‌ಆನ್‌ನ ಉದ್ದೇಶವಾಗಿತ್ತು. ಅವರು ಮುಸ್ಲಿಮರ ನಡುವೆ ಕಣ್ಮರೆಯಾಗಿದೆ. ಮುಸ್ಲಿಮೇತರರು ಮತ್ತು ಮುಸ್ಲಿಮರ ನಡವೆ ಇದ್ದ ಭೇದಭಾವವನ್ನು ಹೊಂದಿದ್ದ ಪ್ರಾಯೋಗಿಕ ಸ್ಥಿತಿಯು ಅತ್ಯಂತ ದುರ್ಬಲವಾಗಿದೆ ಮತ್ತು ಹದಗೆಟ್ಟಿದೆ."

(ಮಲ್‌ಫೂಝಾತ್, ಸಂಪುಟ-4, ಪುಟ-4, 1984 ಆವೃತ್ತಿ)

ಇಂತಹ ಪರಿಸ್ಥಿತಿ ಇದ್ದರೆ ತಬ್‌ಲೀಗ್ ಹೇಗೆ ನಡೆಯುವುದು ಮತ್ತು ನಂತರ ಪ್ರಪಂಚದ ಮೇಲೆ ಮುಸ್ಲಿಮರ ಪರಿಣಾಮ ಏನಾಗುವುದು ಮತ್ತು ಇದು ಇಂದಿನ ದಿನಗಳಲ್ಲಿ ನಾವು ನೋಡುತ್ತಿರುವ ಫಲಿತಾಂಶವಾಗಿದೆ ಮತ್ತು ಅದರ ಪರಿಹಾರವು ಅಹ್ಮದೀಯರಲ್ಲಿದೆ. ನಾವೂ ಕೆಟ್ಟವರಾಗಿದ್ದರೆ, ಇವರನ್ನು ನೋಡಿಕೊಳ್ಳುವವರು ಯಾರು? ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಇದ್ದ ಅಲ್ಲಾಹನ ವಾಗ್ದಾನಗಳು ಅದು ಪೂರೈಸಬೇಕಗಿದೆ. ಆದರೆ ನಾವು ಅವರೊಂದಿಗೆ ಸೇರದಿದ್ದರೆ, ಅಲ್ಲಾಹನು ಅನ್ಯ ಜನಾಂಗದವರನ್ನು ತರುವನು ಮತ್ತು ಅವರ ಮೂಲಕ ವಾಗ್ದಾನಗಳನ್ನು ಪೂರೈಸುವನು.

ನಮ್ಮ ಸಮಾಜದ ಈ ಸ್ಥಿತಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿರುವಾಗ, ನಮ್ಮ ಒಳ್ಳೆಯತನ ಮತ್ತು ತಖ್ವದ ಮಾನದಂಡಗಳ ಬಗ್ಗೆ ನಾವು ಎಷ್ಟು ಕಾಳಜಿಯನ್ನು ಹೊಂದಿರಬೇಕು ಮತ್ತು ನಮ್ಮ ವಂಶಸ್ಥರ ಒಳ್ಳೆಯತನ ಮತ್ತು ತಖ್ವದ ಮಾನದಂಡಗಳ ಬಗ್ಗೆ ನಾವು ಎಷ್ಟು ಕಾಳಜಿಯನ್ನು ಹೊಂದಿರಬೇಕು. ಅವರು ಹೇಳಿದರು: ಅಲ್ಲಾಹನ ವರದಾನಗಳಿಂದ ಪ್ರಯೋಜನ ಪಡೆಯದೇ ಇರುವುದು ತಖ್ವವಲ್ಲ. ಪ್ರಯೋಜನ ಪಡೆಯದಿದ್ದರೆ, ಅದು ತಖ್ವದಿಂದ ದೂರಹೋಗುವುದಾಗಿದೆ.

ಕೆಲವು ಹಿರಿಯರು ಮತ್ತು ಪೀರ್‌ಗಳು ಎಂದು ಕರೆಯಲ್ಪಡುವ ಜನರು ಸಾಮಾನ್ಯ ಬಟ್ಟೆಗಳನ್ನು ಉಡುಪಿಕೊಂಡು ಮತ್ತು ಕೆಟ್ಟ ರುಚಿ ಇಲ್ಲದ ಆಹಾರವನ್ನು ತಿಂದು ನಾವು (ಧರ್ಮನಿಷ್ಠರು) ಮುತ್ತಖಿ ಎಂದು ತೋರಿಸುತ್ತಾರೆ. ತುಂಬಾ ಒಳ್ಳೆಯವರು ಎಂದು ವರ್ತಿಸುತ್ತಾರೆ. ಅವರು ಹೇಳಿದರು: "ಮನುಷ್ಯನು ಎಲ್ಲಾ ಸಮಯದಲ್ಲೂ ಮತ್ತು ಎಲ್ಲಾ ಸಂದರ್ಭಗಳಲ್ಲಿ ದುಆವನ್ನು ಮಾಡುತ್ತಿರಬೇಕು ಮತ್ತು **ಅಮ್ಮಾ ಬಿನಿಅ್‌ಮತಿ ರಬ್ಬಿಕ ಫಹದ್ದಿಸ್** (ಅಝ್ಝುಹಾ: 12) ಎಂಬ ಆಯತ್‌ನ ಮೇಲೆ ಅನುಸರಿಸಬೇಕು. ಸರ್ವಶಕ್ತನಾದ ಅಲ್ಲಾಹನು ದಯಪಾಲಿಸಿರುವ ಅನುಗ್ರಹವನ್ನು ಒಬ್ಬರು ಹೇಳಬೇಕು." ಅವುಗಳನ್ನು ಉಲ್ಲೇಖಿಸಬೇಕು. ಅದನ್ನು ವ್ಯಕ್ತಪಡಿಸಬೇಕು, "ಇದು ಸರ್ವಶಕ್ತನಾದ ಅಲ್ಲಾಹನ ಪ್ರೀತಿಯನ್ನು ಹೆಚ್ಚಿಸುತ್ತದೆ. ಮತ್ತು "ಅನುಗ್ರಹಗಳು ಪ್ರಕಟವಾದಾಗ" ಅವನ ವಿಧೇಯತೆ ಮತ್ತು ಸಲ್ಲಿಕೆಗಾಗಿ ಉತ್ಸಾಹವಿರುತ್ತದೆ. ತಹದೀಸ್ ಎಂದರೆ ಒಬ್ಬ ವ್ಯಕ್ತಿಯು ನಾಲಿಗೆಯಿಂದ ಮಾತ್ರ ಪಠಿಸಬೇಕು ಎಂದು ಅರ್ಥವಲ್ಲ, ಆದರೆ ಅದು ದೇಹದ ಮೇಲೆ ಪರಿಣಾಮ ಬೀರಬೇಕು. ಉದಾಹರಣೆಗೆ, ಸರ್ವಶಕ್ತನಾದ ಅಲ್ಲಾಹನು ಒಬ್ಬ ವ್ಯಕ್ತಿಗೆ ಒಳ್ಳೆಯ ಬಟ್ಟೆಗಳನ್ನು ಧರಿಸುವ ಸಾಮರ್ಥ್ಯವನ್ನು ನೀಡಿದ್ದಾನೆ, ಆದರೆ ಅವನು ಯಾವಾಗಲೂ ಕೊಳಕು ಬಟ್ಟೆಗಳನ್ನು ಧರಿಸುತ್ತಾನೆ, ಅವನು ಕರುಣೆಯನ್ನು ಹೊಂದಲು ಬದ್ಧನೆಂದು ಪರಿಗಣಿಸುತ್ತಾನೆ ಅಥವಾ ಅವನ ಯೋಗಕ್ಷೇಮವನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹವನ್ನು ಮರೆಮಾಡಲು ಬಯಸುತ್ತಾನೆ ಮತ್ತು ಬೂಟಾಟಿಕೆಯನ್ನು ಬಳಸುತ್ತಾನೆ. ಮೋಸ ಮಾಡುತ್ತಾನೆ ಮತ್ತು ಮೋಸಗೊಳಿದಲು ಬಯಸುತ್ತಾನೆ. ಇದು ನಂಬಿಕೆಯುಳ್ಳವರ ಮಹಿಮೆಯಿಂದ ದೂರವಾಗಿದೆ. "ಸತ್ಯವಿಶ್ವಾಸಿಯು ಹಾಗೆ ಮಾಡುವುದಿಲ್ಲ. "ಪ್ರವಾದಿ(ಸ)ರ ಧರ್ಮವು ಸಾಮಾನ್ಯವಾಗಿತ್ತು." ಅಂದರೆ ನಿಮಗೆ ದೊರಕಿದನ್ನು ಎಲ್ಲವೂ ಮಾಡುತ್ತಿದ್ದರು. ಒಂದೇ ಕಡೆ ಗಮನವಿರುತ್ತಿರಲಿಲ್ಲ. ನೀವು ಉತ್ತಮ ಬಟ್ಟೆಗಳನ್ನು ಪಡೆದರೆ, ಉತ್ತಮ

ಬಟ್ಟೆಗಳನ್ನು ಸಹ ಧರಿಸುತ್ತಿದ್ದರು. ಇಲ್ಲದಿದ್ದರೆ, ಸಾಮಾನ್ಯ ಬಟ್ಟೆಗಳನ್ನು ಧರಿಸುತ್ತಿದ್ದರು. ಅವರು ಹೇಳುತ್ತಾರೆ: ಅವರಿಗೆ ಯಾವುದು ದೊರಕುತ್ತಿತ್ತೊ ಅದನ್ನು ಧರಿಸಿಕೊಳ್ಳುತ್ತಿದ್ದರು ಆಕ್ಷೇಪ ವ್ಯಕ್ತಪಡಿಸುತ್ತಿರಲಿಲ್ಲ. ಅವರು ಯಾವ ಬಟ್ಟೆಯನ್ನು ಅರ್ಪಿಸಿದರೂ ಅದನ್ನು ಸ್ವೀಕರಿಸುತ್ತಿದ್ದರು, ಆದರೆ ನಿಮ್ಮ ನಂತರ ಕೆಲವರು ಅದರಲ್ಲಿ ನಮ್ರತೆಯನ್ನು ಕಂಡು ಸನ್ಯಾಸತ್ವದ ಅಂಶವನ್ನು ಸೇರಿಸಿದರು. ಕೆಲವು ದರವೇಶ್‌ಗಳು ಮಾಂಸಕ್ಕೆ ಧೂಳನ್ನು ಹಾಕಿಕೊಂಡು ತಿನ್ನುವುದು ಕಂಡುಬಂದಿತು. ಅವರು ತಮ್ಮನ್ನು ತಾವು ಡರ್ವಿಶ್ ಎಂದು ಕರೆದು ಮಾಂಸಕ್ಕೆ ಮಣ್ಣು ಹಾಕಿಕೊಂಡು ತಿನ್ನುತ್ತಾರೆ. ಒಬ್ಬ ವ್ಯಕ್ತಿ ಡರ್ವಿಶ್‌ನ ಬಳಿಗೆ ಹೋಗಿ, "ಅವನಿಗೆ ಆಹಾರವನ್ನು ತಿನ್ನಿಸಿ" ಎಂದು ಹೇಳಿದನು, "ಅತಿಥಿಗೆ ಆಹಾರ ನೀಡಿ" ಎಂದು ಆ ದರ್ವಿಶ್ ತನ್ನ ಶಿಷ್ಯರಿಗೆ ಹೇಳಿದನು, ಆಗ ಆ ಅತಿಥಿಯು ನಾನು ನಿಮ್ಮೊಂದಿಗೆ ತಿನ್ನುತ್ತೇನೆ ಎಂದು ಹೇಳಿದನು, "ಕೊನೇಗೆ ಆ ಅತಿಥಿಯು ಆ ದರ್ವೇಶ್‌ನೊಂದಿಗೆ ಊಟಕ್ಕೆ ಕುಳಿತುಕೊಂಡಾಗ ಅವನ ಮುಂದೆ ಬೇವಿನಿಂದ ತಯಾರಿಸಲ್ಪಟ್ಟ ಹುಂಡೆಗಳನ್ನು ಅವನ ಮುಂದೆ ಇರಿಸಲಾಯಿತು."

ಬೇವು ಒಂದು ಮರವಾಗಿದ್ದು ಅದರ ಎಲೆಗಳು ತುಂಬಾ ಕಹಿಯಾರುತ್ತದೆ. ಅದರಿಂದ ಅವನ ಆಹಾರವನ್ನು ಬೇಯಿಸಲಾಯಿತು ಮತ್ತು ಅವನಿಗೆ ಕಹಿ ಆಹಾರವನ್ನು ನೀಡಲಾಯಿತು. ಇದರ ರುಚಿ ಏನು ಇರಲಿಲ್ಲ. ರುಚಿ ಎಂತಹದ್ದು? ಅಪಾಯಕಾರಿ ರೀತಿಯ ಕಹಿ ರುಚಿ. "ಕೆಲವರು ಇಂತಹ ವಿಷಯಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು ಪರಿಪೂರ್ಣರು ಎಂದು ಜನರಿಗೆ ಮನವರಿಕೆ ಮಾಡುವುದು ಉದ್ದೇಶವಾಗಿರುತ್ತದೆ. ಆದರೆ ಇಸ್ಲಾಂ ಅಂತಹ ವಿಷಯಗಳನ್ನು ಪರಿಪೂರ್ಣಗೊಳಿಸಲು ಅನುಮತಿಸುವುದಿಲ್ಲ" ಎಂದು ಅವರು ಹೇಳಿದರು.

ಇಸ್ಲಾಮಿನ ಪರಿಪೂರ್ಣತೆಯು ಮುತ್ತಖಿಯಾಗಿದ್ದು ಅದು ರಕ್ಷಕತ್ವವನ್ನು ನೀಡುತ್ತದೆ, ಇದರಿಂದ ದೇವದೂತರು ಮಾತನಾಡುತ್ತಾರೆ, ಸರ್ವಶಕ್ತನಾದ ಅಲ್ಲಾಹನು ಒಳ್ಳೆಯ ಸುದ್ದಿಯನ್ನು ನೀಡುತ್ತಾನೆ. ನಾವು ಈ ರೀತಿಯ ಶಿಕ್ಷಣವನ್ನು ನೀಡುವುದಿಲ್ಲ ಏಕೆಂದರೆ ಇದು ಇಸ್ಲಾಮಿನ ಅದನ್ನು ಕಲಿಸುವ ಉದ್ದೇಶಕ್ಕೆ ವಿರುದ್ಧವಾಗಿದೆ. ಪವಿತ್ರ ಖುರ್‌ಆನ್ **ಕುಲೂ ಮಿನತ್ತೈಯಿಬಾತ್** ಎಂದು ಕಲಿಸುತ್ತದೆ: ಅಂದರೆ "ಒಳ್ಳೆಯದನ್ನು ತಿನ್ನಿರಿ" ಮತ್ತು ಈ ಜನರು ಒಳ್ಳೆಯದಕ್ಕೆ ಧೂಳನ್ನು ಬೆರೆಸುವ ಮೂಲಕ ಒಳ್ಳೆಯದನ್ನು ಅನಾರೋಗ್ಯಕರವಾಗಿಸುತ್ತಾರೆ. ಇಸ್ಲಾಂ ಧರ್ಮದ ನಂತರ ಬಹಳ ಹಿಂದೆಯೇ ಇಂತಹ ಧರ್ಮಗಳು ಹುಟ್ಟಿಕೊಂಡಿವೆ. ಈ ಜನರು ಪ್ರವಾದಿ(ಸ) ಅವರಿಗೆ ಸೇರಿಸುತ್ತಾರೆ. ಅವರಿಗೆ ಇಸ್ಲಾಂ ಧರ್ಮಕ್ಕೂ ಪವಿತ್ರ ಖುರ್‌ಆನ್‌ಗೂ ಯಾವುದೇ ಸಂಬಂಧವಿಲ್ಲ. ಅವರು ತಮ್ಮದೇ ಆದ ಕಾನೂನನ್ನು ಸ್ಥಾಪಿಸುತ್ತಾರೆ. ನಾನು ಅದನ್ನು ತೀವ್ರ ತಿರಸ್ಕಾರ ಮತ್ತು ದ್ವೇಷದಿಂದ ನೋಡುತ್ತೇನೆ. ಪ್ರವಾದಿ(ಸ) ಅವರು ನಮಗೆ ಮಾದರಿಯಾಗಿದ್ದಾರೆ. ನಮ್ಮ ಒಳ್ಳೆಯತನ ಮತ್ತು ಪುಣ್ಯವೆಂದರೆ ನಾವು ಸಾಧ್ಯವಾದಷ್ಟು ಪ್ರವಾದಿ(ಸ) ಅವರ ಹಾದಿಯಲ್ಲಿ ನಡೆಯಬೇಕು ಮತ್ತು ಅದರ ವಿರುದ್ಧ ಯಾವುದೇ ಹೆಜ್ಜೆ ಇಡಬಾರದು.

ಇದು ಆಹಾರದ ವಿಷಯವಾಗಿದೆ. ನಂತರ ದಿನನಿತ್ಯದ ನೈತಿಕತೆಯ ವಿಷಯಕ್ಕೆ ಬಂದರೆ, ಅದೇ ರೀತಿಯಲ್ಲಿ ಪತ್ನಿ ಮತ್ತು ಮಕ್ಕಳೊಂದಿಗೆ ಸಂಬಂಧ ಮತ್ತು ಮನೆಯಲ್ಲಿ ತೋರಿಸಬೇಕಾದ ವರ್ತನೆಯ ಬಗ್ಗೆಯೂ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪತ್ನಿಯಂದಿರು ಮತ್ತು ಮಕ್ಕಳೊಂದಿಗೆ ಇರುವ ಸಂಬಂಧ ಮತ್ತು ವರ್ತನೆಗಳ ಬಗ್ಗೆ ಜನರು ತಪ್ಪು ಮಾಡಿರುವರು. ಸರಿಯಾದ ಮಾರ್ಗದಿಂದ ತಪ್ಪಿರುವರು. ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಿರಿ ಎಂದು ಪವಿತ್ರ ಖುರ್‌ಆನಿನಲ್ಲಿ ಬರೆದಿದೆ. ಆದರೆ ಈಗ ಅದರ ವಿರುದ್ಧವಾಗಿ ನಡೆಯಲಾಗುತ್ತದೆ.
(ಮಲ್‌ಫೂಝಾತ್, ಸಂಪುಟ–4, ಪುಟ–43–44, 1984 ಆವೃತ್ತಿ)

ಉತ್ತಮ ವರ್ತನೆ ಬಿಡಿ, ಅದರ ಬದಲಾಗಿ ಕೆಲವು ಮನೆಗಳಲ್ಲಿ ದೌರ್ಜನ್ಯಗಳನ್ನು ಮಾಡಲಾಗುತ್ತದೆ. ಒಟ್ಟಿನಲ್ಲಿ, ಸಾಂಪತ್ತಿಕ ಶಕ್ತಿಯಿದ್ದರೆ, ಉತ್ತಮ ವಸ್ತ್ರಗಳನ್ನು ಧರಿಸುವುದು, ಉತ್ತಮ ಆಹಾರಗಳನ್ನು ಸೇವಿಸುವುದರಿಂದ ತಖ್ವ ಕಡಿಮೆಗೊಳ್ಳುವುದಿಲ್ಲ. ಬದಲಾಗಿ ಅದು ವರ್ಧಿಸುತ್ತದೆ. ಅದೇ ರೀತಿಯಲ್ಲಿ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವುದು ಕೂಡ ಆವಶ್ಯಕ. ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುವುದು, ಅವರ ಆವಶ್ಯಕತೆಗಳನ್ನು ಈಡೇರಿಸುವುದು, ಅವರ ಸರಿಯಾದ ತರಬೇತಿ ಮಾಡುವುದು ಕೂಡ ಅವಶ್ಯ. ಇವುಗಳೂ ತಖ್ವ ಆಗಿದೆ ಮತ್ತು ಇವುಗಳು ಪವಿತ್ರ ಖುರ್‌ಆನಿನ ಆಜ್ಞೆಯಾಗಿದೆ. ಒಟ್ಟಿನಲ್ಲಿ ಅಲ್ಲಾಹನಿಗೆ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸುವುದು ಆವಶ್ಯ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೈಜವಾದ ತಖ್ವದೊಂದಿಗೆ ಅಜ್ಞತೆ, ಮೂರ್ಖತನ ಸೇರುವುದಿಲ್ಲ. ನೈಜವಾದ ತಖ್ವವು ತನ್ನ ಜೊತೆಗೆ ಒಂದು ಪ್ರಕಾಶವನ್ನು ಇರಿಸುತ್ತದೆ. ಇದರ ಬಗ್ಗೆ ಅಲ್ಲಾಹನು ಹೇಳುತ್ತಾನೆ: **ಯಾ ಅಯ್ಯುಹಲ್ಲಝೀನ ಆಮನೂ ಇನ್ ತತ್ತಖುಲ್ಲಾಹ ಯಜ್‌ಅಲ್ಲಕುಮ್ ಫುರ್ಖಾನವ್ವಯುಕಫ್ಫಿರ್ ಅನ್‌ಕುಮ್ ಸಯ್ಯಿಆತಿಕುಮ್** (ಅಲ್ ಹದೀದ್: 29) ಎಂದರೆ, ಎಲೈ ಸತ್ಯವಿಶ್ವಾಸಿಗಳೇ, ಅಲ್ಲಾಹನಿಗೆ ಭಯಪಡಿರಿ ಹಾಗೂ ಅವನ ಸಂದೇಶವಾಹಕನಲ್ಲಿ ವಿಶ್ವಾಸವಿರಿಸಿರಿ. ಹಾಗೆ ಮಾಡಿದರೆ ಅಲ್ಲಾಹನು ತನ್ನ ಕರುಣೆಯಲ್ಲಿ ನಿಮಗೆ ಎರಡು ಪಾಲನ್ನು ನೀಡುವನು. ಅವನು ನಿಮಗೆ ಒಂದು ಪ್ರಕಾಶವನ್ನೂ ನೀಡುವನು. ಅದರ ಮೂಲಕ ನೀವು ನಡೆಯುವಿರಿ. ಎಂದರೆ, ಆ ಪ್ರಕಾಶವು ನಿಮ್ಮ ಎಲ್ಲ ಕೃತ್ಯಗಳು, ಮಾತುಗಳು, ಸಾಮರ್ಥ್ಯಗಳು ಮತ್ತು ಭಾವನೆಗಳಲ್ಲಿ ಬರುವುದು. ನಿಮ್ಮ ಬುದ್ಧಿಯಲ್ಲೂ ಪ್ರಕಾಶವಿರುವುದು, ನೀವು ಆಡುವ ಪ್ರತಿಯೊಂದು ಮಾತಿನಲ್ಲೂ ಪ್ರಕಾಶವಿರುವುದು. ಅಲ್ಲಾಹನ ಇಷ್ಟ ಪ್ರಕಾರ ನಡೆಯುವವನಿಂದ ಯಾವುದೇ ತಪ್ಪಾದ ಕೃತ್ಯಗಳು ಆಗಲಾರದು. ಇನ್ನೇನಾದರು ಆದರೆ ಕೂಡ ಅಲ್ಲಾಹನು ಅದರ ಸುಧಾರಣೆ ಕಡೆಗೆ ಅವನ ಗಮನಸೆಳೆಯುವನು. ಪಶ್ಚಾತ್ತಾಪ ಮಾಡುವುದರ ಕಡೆಗೆ ಅಲ್ಲಾಹನು ಗಮನಸೆಳೆಯುವನು. ನಿಮ್ಮ ಆಡುಮಾತಿನಲ್ಲೂ ಪ್ರಕಾಶವಿರುವುದು, ನಿಮ್ಮ ಕಣ್ಣುಗಳಲ್ಲೂ ಪ್ರಕಾಶವಿರುವುದು, ನಿಮ್ಮ ಕಿವಿಗಳಲ್ಲಿ, ನಿಮ್ಮ ನಾಲಗೆಗಳಲ್ಲಿ, ನಿಮ್ಮ ಪ್ರತಿಯೊಂದು ಚಲನವಲನಗಳಲ್ಲಿ ಪ್ರಕಾಶವಿರುವುದು. ನೀವು ನಡೆಯುವ ಮಾರ್ಗಗಳು ಪ್ರಕಾಶಭರಿತವಾಗುವುದು. ನೀವು ಸಂಪೂರ್ಣವಾಗಿ ಪ್ರಕಾಶಿತರಾಗುವಿರಿ. (ಆಯಿನ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–5, ಪುಟ–177–178)

ನೀವು ಹೊಂದಿರುವ ಮಾರ್ಗಗಳು ಸದಾಚಾರದ ಮಾರ್ಗಗಳಾಗುತ್ತವೆ. ನಿಮ್ಮಲ್ಲಿರುವ ಶಕ್ತಿಗಳು ಸಹ ಒಳ್ಳೆಯ ಕಾರ್ಯಗಳನ್ನು ಮಾಡುತ್ತದೆ. ನಿಮ್ಮ ಆಲೋಚನೆಗಳು ಮತ್ತು ಯೋಚನೆಗಳು ಉತ್ತಮವಾಗಿರುತ್ತವೆ. ದುಷ್ಟ ಆಲೋಚನೆಗಳು ಮಾಯವಾಗುತ್ತವೆ ಮತ್ತು ಅಂತಹ ಸಮಾಜವು ಸ್ಥಾಪನೆಯಾದಾಗ ಅದು ಖಂಡಿತವಾಗಿಯೂ ಧರ್ಮನಿಷ್ಠೆಯನ್ನು ಅನುಸರಿಸುವವರ ಸಮಾಜವಾಗಿರುತ್ತದೆ. ಪರಿಪೂರ್ಣ ಜ್ಞಾನದ ನಂತರ ಇದೆಲ್ಲವೂ ಸಿಗುತ್ತದೆ ಎಂಬುದೇ ಪ್ರಕೃತಿ ನಿಯಮವಾಗಿದೆ ಎಂದು ಹೇಳಿದರು. ಭಯ ಮತ್ತು ಪ್ರೀತಿ ಮತ್ತು ಮೆಚ್ಚುಗೆಯ ಮೂಲವು ಪರಿಪೂರ್ಣ ಜ್ಞಾನವಾಗಿದೆ, ಆದ್ದರಿಂದ ಪರಿಪೂರ್ಣ ಜ್ಞಾನವನ್ನು ನೀಡಿದವನಿಗೆ ಪರಿಪೂರ್ಣ ಭಯ ಮತ್ತು ಪ್ರೀತಿಯನ್ನು ನೀಡಲಾಯಿತು. ಮತ್ತು ಪರಿಪೂರ್ಣ ಭಯ ಮತ್ತು ಪ್ರೀತಿಯನ್ನು ನೀಡಿದವನು ನಿರ್ಭಯತೆಯಿಂದ ಹುಟ್ಟುವ ಪ್ರತಿಯೊಂದು ಪಾಪದಿಂದ ರಕ್ಷಿಸಲ್ಪಡುವನು.

ಆದ್ದರಿಂದ ಈ ಮೋಕ್ಷಕ್ಕಾಗಿ ನಮಗೆ ಯಾವುದೇ ರಕ್ತದ ಅಗತ್ಯವಿಲ್ಲ ಮತ್ತು ನಮಗೆ ಯಾವುದೇ ಶಿಲುಬೆಯ ಅಗತ್ಯವಿಲ್ಲ ಮತ್ತು ನಮಗೆ ಯಾವುದೇ ಪ್ರಾಯಶ್ಚಿತ್ತದ ಅಗತ್ಯವಿಲ್ಲ ಆದರೆ ನಮಗೆ ಒಂದೇ ಒಂದು ತ್ಯಾಗ ಬೇಕು ಅದು ನಮ್ಮ ಆತ್ಮದ ತ್ಯಾಗವಾಗಿದೆ. ನಮ್ಮ ಸ್ವಭಾವವು ಅದರ ಅಗತ್ಯವನ್ನು ಅನುಭವಿಸುತ್ತಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅಂತಹ ತ್ಯಾಗದ ಹೆಸರು ಇಸ್ಲಾಮ್ ಆಗಿದೆ. "ಇಸ್ಲಾಮ್ ಎಂದರೆ ವಧೆಗಾಗಿ ತನ್ನ ಕುತ್ತಿಗೆಯನ್ನು ಮುಂದಕ್ಕೆ ಹಾಕುವುದಾಗಿದೆ, ಅಂದರೆ ಒಬ್ಬರ ಆತ್ಮವನ್ನು ಅಲ್ಲಾಹನ ಆಸ್ತಾನದಲ್ಲಿ ಪರಿಪೂರ್ಣವಾಗಿ ಸಂತೋಷದಿಂದ ಇಡುವುದಾಗಿದೆ. ಈ ಸುಂದರವಾದ ಹೆಸರು ಎಲ್ಲಾ ಕಾನೂನಿನ ಆತ್ಮ ಮತ್ತು ಎಲ್ಲಾ ಆಜ್ಞೆಗಳ ಆತ್ಮವಾಗಿದೆ. ಒಬ್ಬರ ಹೃದಯದ ಸಂತೋಷ ಮತ್ತು ವಧೆಗಾಗಿ ಸಂತೋಷದಿಂದ ಕುತ್ತಿಗೆಯನ್ನು ಮುಂದಕ್ಕೆ ಹಾಕುವುದು ಪರಿಪೂರ್ಣ ಪ್ರೀತಿಯನ್ನು ಬಯಸುತ್ತದೆ ಪರಿಪೂರ್ಣ ಪ್ರೀತಿಯು ಪರಿಪೂರ್ಣ ಜ್ಞಾನವನ್ನು ಬಯಸುತ್ತದೆ." ಯಾವುದಾದರ ವಸ್ತುವಿನ ಬಗ್ಗೆ ಜ್ಞಾನವಿಲ್ಲದಿದ್ದರೆ, ಪ್ರೀತಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ. "ಆದ್ದರಿಂದ ಇಸ್ಲಾಮ್ ಎಂಬ ಪದವು ಸೂಚಿಸುವುದೇನೆಂದರೆ ನಿಜವಾದ ತ್ಯಾಗಕ್ಕೆ ಪರಿಪೂರ್ಣ ಜ್ಞಾನ ಹಾಗೂ ಪರಿಪೂರ್ಣ ಪ್ರೀತಿಯ ಅಗತ್ಯವಿರುತ್ತದೆ, ಬೇರೇನೂ ಅಲ್ಲ. ಇದನ್ನು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸೂಚಿಸುತ್ತಾನೆ: **ಲೈಂ ಯನಾಲುಲ್ಲಾಹು ಲುಹೂಮುಹಾ ವಲಾ ದಿಮಾಉಹಾ ವಲಾಕಿನ್ ಯಲಾನುಹುತ್ತಖ್ವ ಮಿನ್‌ಕುಮ್** (ಅಲ್‌ಹಜ್ಜ್: 38) ಅಂದರೆ: ನಿಮ್ಮ (ತ್ಯಾಗಗಳಲ್ಲಿ) ಅವುಗಳ ಮಾಂಸವಾಗಲಿ ಅಥವಾ ರಕ್ತವಾಗಲಿ ಅಲ್ಲಾಹನಿಗೆ ತಲುಪುವುದಿಲ್ಲ. ಆದರೆ ನಿಮ್ಮ ಭಯಭಕ್ತಿಯು ಅವನಿಗೆ ತಲುಪುತ್ತದೆ." (ಲೆಕ್ಚರ್ ಲಾಹೋರ್, ರೂಹಾನಿ ಖಝಾಇನ್, ಸಂಪುಟ–20, ಪುಟ–151–152)

ಆದ್ದರಿಂದ ಅಲ್ಲಾಹನು ನಮ್ಮಿಂದ ಬಯಸುವ (ತಖ್ವದ) ಧರ್ಮನಿಷ್ಠೆಯ ಮಾನದಂಡವು ಇದಾಗಿದೆ. ಇದು ಅಲ್ಲಾಹನ ಸಂದೇಶವಾಹಕರು ನಮ್ಮಿಂದ ಬಯಸುತ್ತಾರೆ. ಪ್ರಸ್ತುತ ಕಾಲಘಟ್ಟ ಇಮಾಮ್ ನಮ್ಮಿಂದ ಬಯಸುತ್ತಾರೆ ಮತ್ತು ಇದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ

ಪದೇ ಪದೇ ಸೂಚಿಸಲಾಗಿದೆ ಮತ್ತು ಇದನ್ನು ಸಾಧಿಸುವ ಸಲುವಾಗಿ ರಂಜಾನ್ ತಿಂಗಳಲ್ಲಿ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ.

ಈ ತಖ್ವವನ್ನು ಪಡೆಯಲು ನಾವು ರಂಜಾನ್‌ನ ಉಳಿದ ಉಪವಾಸಗಳನ್ನು ಆಚರಿಸಬೇಕು ಎಂಬ ಚಿಂತನೆಯಿಂದ ಶ್ರಮಿಸುವ ನಾವು ಧನ್ಯರಾಗಿದ್ದೇವೆ. ಈ ರೀತಿ ಆಚರಿಸಲು ಅಲ್ಲಾಹನು ನಮ್ಮೆಲ್ಲರನ್ನು ಅನುಗ್ರಹಿಸಲಿ ಮತ್ತು ನಾವು ನಮ್ಮ ಮಾತುಗಳನ್ನು ಮತ್ತು ಕಾರ್ಯಗಳನ್ನು ಸರ್ವಶಕ್ತನಾದ ಅಲ್ಲಾಹನ ಇಚ್ಛೆಗೆ ಹೊಂದಿಕೊಳ್ಳಬೇಕು.

ಒಬ್ಬ ವ್ಯಕ್ತಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬಳಿಗೆ ಬಂದನು. ನೀವು ವಾಗ್ದಾತ್ತ ಮಸೀಹರು ಎಂದು ಹೇಳಿಕೊಂಡಿದ್ದೀರಿ ಎಂದು ಜನರು ಆಕ್ಷೇಪಿಸುತ್ತಾರೆ, ನೀವು ಸೈಯದ್ ಜನಾಂಗಕ್ಕೆ ಸೇರಿದ್ದವರಲ್ಲ ಮತ್ತು ಸೈಯದ್ ಇಲ್ಲದವನು ಓರ್ವ ಉಮ್ಮತಿಯ ಬೈಅತ್ ತೆಗೆದುಕೊಳ್ಳಲು ಹೇಗೆ ಸಾಧ್ಯ? ಕೆಲವರು ಸಯ್ಯದ್‌ರನ್ನು ಉನ್ನತ ಸ್ಥಾನವನ್ನು ನೀಡುವವರು ಈಗಲೂ ಆಕ್ಷೇಪಿಸುವುದೆನಂದರೆ ಸೈಯದ್‌ಗಳು ಅಸಾಧಾರಣ ಸ್ಥಾನವನ್ನು ಹೊಂದಿದ್ದಾರೆ. ಹಾಗಾದರೆ ಸೈಯದ್ ಗೋತ್ರದವರು ಸೈಯದ್ ಅಲ್ಲದವರ ಬೈಅತ್ ಹೇಗೆ ಮಾಡುತ್ತಾರೆ? ಅದೇ ರೀತಿ ಇಂದಿನ ದಿನಗಳಲ್ಲಿ ಕೆಲವು ಅರಬ್ಬರು ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಬರಬೇಕಾದರೆ, ಅವರು ಅರಬ್ಬರ ನಡುವೆಯೇ ಬರಬೇಕು ಎಂಬ ಕಲ್ಪನೆಯನ್ನು ಹೊಂದಿದ್ದಾರೆ, ಅವರು ಅರಬ್ಬರಲ್ಲದವರಿಂದ ಹೇಗೆ ಬಂದರು? ನಾವು ಹೇಗೆ ನಂಬಬೇಕು? ಅವರು ಪವಿತ್ರ ಖುರ್‌ಆನ್ ಅನ್ನು ಓದುತ್ತಾರೆ ಆದರೆ ಅದನ್ನು ಆಲೋಚನೆಯಿಂದ ಗಾಂಭೀರ್ಯದಿಂದ ಓದುವುದಿಲ್ಲ ಉತ್ತರವು ಈಗಾಗಲೇ ಅದರಲ್ಲಿಯೇ ಇದೆ. ಈ ಸ್ಥಾನವನ್ನು ನೀಡುವವನು ನಾನಾಗಿದ್ದೇನೆ ಎಂದು ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ. ಈ ಸ್ಥಳವನ್ನು ವಿಭಜಿಸುವವರು ದಾಸರಲ್ಲ. ಏನೇಇರಲಿ ಅವರು(ಅ) ಹೇಳುತ್ತಾರೆ, "ಅಲ್ಲಾಹನು ದೈಹಿಕವಾಗಿ ಅಥವಾ ಗೋತ್ರವನ್ನು ನೋಡಿ ಸಂತೋಷಪಡುವುದಿಲ್ಲ, ಬದಲಿಗೆ ಅಲ್ಲಾಹನ ದೃಷ್ಟಿಯು ಯಾವಾಗಲೂ ಧರ್ಮನಿಷ್ಠೆಯ ಮೇಲೆ ಇರುತ್ತದೆ. **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್–ಹುಜುರಾತ್: 14) ಅಂದರೆ ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಟನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನಾಗಿದ್ದಾನೆ. ನಾನು ಸೈಯದ್ ಅಥವಾ ಮೊಘಲ್ ಅಥವಾ ಪಠಾಣ್ ಮತ್ತು ಶೇಖ್ ಎಂಬುದು ಸಂಪೂರ್ಣವಾಗಿ ಸುಳ್ಳು ವಿಷಯವಾಗಿದೆ. ಅವನು ತನ್ನ ಮಹಾನ್ ಗೋತ್ರದ ಬಗ್ಗೆ ಹೆಮ್ಮೆಪಡುತ್ತಿದ್ದರೆ, ಈ ಹೆಮ್ಮೆ ನಿಷ್ಪ್ರಯೋಜಕವಾಗಿದೆ. ಸಾವಿನ ನಂತರ ಎಲ್ಲಾ ಗೋತ್ರಗಳು ದೂರ ಹೋಗುತ್ತವೆ. ಸರ್ವಶಕ್ತ ಅಲ್ಲಾಹನ ದೃಷ್ಟಿಯಲ್ಲಿ, ಯಾರೂ ಗೋತ್ರವನ್ನು ನೋಡುವುದಿಲ್ಲ ಮತ್ತು ಉನ್ನತ ಕುಟುಂಬದಿಂದ ಯಾರನ್ನೂ ಉಳಿಸಲಾಗುವುದಿಲ್ಲ. ಪ್ರವಾ(ಸ) ಫಾತಿಮಾಳೊಂದಿಗೆ ಹೇಳಿದರು: ಓ ಫಾತಿಮಾ, ನೀನು ಪ್ರವಾದಿಯ ಮಗಳು ಎಂದು ಹೆಮ್ಮೆಪಡಬೇಡ. ಅಲ್ಲಾಹನ ದೃಷ್ಟಿಯಲ್ಲಿ, ಕುಟುಂಬವು ಅಪ್ರಸ್ತುತವಾಗುತ್ತದೆ." ಆದ್ದರಿಂದ ಈ ಆಜ್ಞೆಯು ಹಝ್ರತ್ ಫಾತಿಮಾ(ರ) ಅವರಿಗೆ ಅನ್ವಯವಾಗಿರುವಾಗ, ಯಾರು ಉಳಿದಿದ್ದಾರೆ? ಮತ್ತೆ ಹೇಳುತ್ತಾರೆ: ಅಲ್ಲಿ ಸಿಗುವ ಮಟ್ಟುಗಳು ತಖ್ವದ ದೃಷ್ಟಿಯಿಂದ ಸಿಗುತ್ತವೆ. ಈ ಕುಲ ಗೋತ್ರಗಳು ಮತ್ತು ಲೌಕಿಕ ಹೆಸರು ಮತ್ತು ವ್ಯವಸ್ಥೆ. ಅಲ್ಲಾಹನೊಂದಿಗೆ ಅದರ ಯಾವುದೇ ಸಂಬಂಧವಿಲ್ಲ.

ಅಲ್ಲಾಹನ ಪ್ರೀತಿಯು ತಖ್ವದಿಂದ ಹುಟ್ಟಿದೆ ಮತ್ತು ತಖ್ವವು ಉನ್ನತ ಮಟ್ಟಗಳಿಗೆ ಕಾರಣವಾಗಿದೆ. ಓರ್ವ ವ್ಯಕ್ತಿ ಸಯ್ಯದ್ ಆಗಿದ ನಂತರ ಅವನು ಕ್ರಿಶ್ಚಿಯನ್ ಆಗುತ್ತಾನೆ ಮತ್ತು ಪ್ರವಾದಿ(ಸ) ಅವರನ್ನು ಅವಮಾನಿಸಿದರೆ ಮತ್ತು ಅಲ್ಲಾಹನ ಆಜ್ಞೆಗಳನ್ನು ಅಗೌರವಿಸಿದರೆ. ಅವನು ಪ್ರವಾದಿಯವರ ಕುಟುಂಬವಾಗಿರುವುದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ರಕ್ಷಿಸುತ್ತಾನೆ ಎಂದು ಯಾರಾದರೂ ಹೇಳಬಹುದೇ? ಮತ್ತು ಅವನು ಸ್ವರ್ಗವನ್ನು ಪ್ರವೇಶಿಸುವನೇ. **ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಮ್** (ಆಲಿ ಇಮ್ರಾನ್: 20) ಅಲ್ಲಾಹನ ಸಮೀಪದಲ್ಲಿ ನಿಜವಾದ ಧರ್ಮ ಮತ್ತು ಮೋಕ್ಷ ಪಡೆಯಬಹುದಾದ ಧರ್ಮ ಇಸ್ಲಾಮ್ ಆಗಿದೆ. ಒಬ್ಬ ವ್ಯಕ್ತಿಯು ಕ್ರಿಶ್ಚಿಯನ್ ಅಥವಾ ಯಹೂದಿ ಅಥವಾ ಆರ್ಯನಾಗಿದ್ದರೆ, ಅವನು ಅಲ್ಲಾಹನ ಗೌರವಕ್ಕೆ ಅರ್ಹನಲ್ಲ. ಸರ್ವಶಕ್ತ ಅಲ್ಲಾಹನು ಜಾತಿ ಮತ್ತು ಕುಲ ಗೋತ್ರಗಳನ್ನು ಅಳಿಸಿಹಾಕಿದಾನೆ. ಇವು ಪ್ರಪಂಚದ ನಿರ್ವಹಣೆ ಮತ್ತು ಪದ್ಧತಿಗಾಗಿ ಬುಡಕಟ್ಟುಗಳಾಗಿವೆ. ಮುತ್ತಖಿಯಾದವನು ಸ್ವರ್ಗಕ್ಕೆ ಹೋಗುತ್ತಾನೆ ಎಂಬುದಕ್ಕೆ ಅಲ್ಲಾಹನು ನಿರ್ಧರಿಸಿದ್ದಾನೆ. ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಗೌರವಾನ್ವಿತನು ಮುತ್ತಖಿಯಾಗಿದ್ದಾನೆ. ನಂತರ ಅವನು ಹೇಳಿದ್ದು ಏನೆಂದರೆ: **ಇನ್ನಮಾ ಯತಖಬ್ಬಲಲ್ಲಾಹು ಮಿನಲ್ ಮುತ್ತಖೀನ್** (ಅಲ್‌ಮಾಇದಃ: 28) ಅಲ್ಲಾಹನು ಮುತ್ತಖಿಯಿಂದ ಮಾತ್ರ ಬಲಿದಾನಗಳನ್ನು ಸ್ವೀಕರಿಸುತ್ತಾನೆ. **ಮಿನಸ್ಸಯ್ಯಿದೀನ** ಎಂದು ಹೇಲಲಿಲ್ಲ. ನಂತರ ಮುತ್ತಖಿಯ ಬಗ್ಗೆ ಹೇಳಿದನು: **ಮೈಂಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್ರಜ, ವಯರ್‌ಝುಖ್‌ಹು ಮಿನ್ ಹೈಸು ಲಾ ಯಹ್‌ತಸಿಬ್** (ಅತ್ತಲಾಖ್: 3,4) ಅಂದರೆ, ಮುತ್ತಖಿಯರು ಪ್ರತಿಯೊಂದು ಕಷ್ಟಗಳಿಂದ ಪಾರಾಗುತ್ತಾರೆ. ಮತ್ತು ಅವನು ಊಹಿಸದ ಕಡೆಯಿಂದ ಅವನಿಗೆ ಜೀವನಾಧಾರ ನೀಡುವನು. ಈಗ ಹೇಳಿರಿ ಈ ವಾಗ್ದಾನ ಮಾಡಿರುವುದು ಸಯ್ಯದರೊಂದಿಗೆ ಆಗಿದೆಯೋ ಅಥವಾ ಮುತ್ತಖಿಗಳೊಂದಿಗೆ? ತದನಂತರ ಮುತ್ತಖಿಯರು ಮಾತ್ರ ಸರ್ವಶಕ್ತನಾದ ಅಲ್ಲಾಹನ ರಕ್ಷಕರು ಎಂದು ಹೇಳಲಾಗಿದೆ. ಈ ವಾಗ್ದಾನವು ಸಯ್ಯದರೊಂದಿಗೆ ಆಗಲಿಲ್ಲ, ರಕ್ಷಕತ್ವದಿಂದ ಹೆಚ್ಚಿನ ಸ್ಥಾನ ಬೇರೆ ಯಾವುದು ಇಲ್ಲ. ಇದನ್ನು ಸಹ ಮುತ್ತಖಿಯರಿಗೆ ಮಾತ್ರ ನೀಡಲಾಗಿದೆ. ಕೆಲವರು ಪ್ರವಾದಿತ್ವಕ್ಕಿಂತ ರಕ್ಷಕತ್ವಕ್ಕೆ ಪ್ರಾಧಾನ್ಯತೆಯನ್ನು ನೀಡಿದ್ದಾರೆ ಮತ್ತು ಪ್ರವಾದಿಯ ಪಾಲನೆಯು ಅವರ ಪ್ರವಾದಿತ್ವಕ್ಕಿಂತ ಶ್ರೇಷ್ಠವಾಗಿದೆ ಎಂದು ಹೇಳಿದ್ದಾರೆ. ಪ್ರವಾದಿಯ ಅಸ್ತಿತ್ವವು ವಾಸ್ತವವಾಗಿ ಎರಡು ವಿಷಯಗಳ ಮಿಶ್ರಣವಾಗಿದೆ. ನಬುವ್ವತ್ ಮತ್ತು ವಿಲಾಯತ್ (ರಕ್ಷಕತ್ವ). ನಬುವ್ವತ್‌ನ ಮೂಲಕ ಅವನು ಜೀವಿಗಳಿಗೆ ನಿಯಮಗಳು ಮತ್ತು ನಿಬಂಧನೆಗಳನ್ನು ನೀಡುತ್ತಾನೆ ಮತ್ತು (ವಿಲಾಯತ್) ರಕ್ಷಕತ್ವವು ಅಲ್ಲಾಹನೊಂದಿಗೆ ಅವನ ಸಂಬಂಧವನ್ನು ಸ್ಥಾಪಿಸುತ್ತದೆ.

ಮತ್ತೆ ಅವರು ಹೇಳಿದರು. **ಝಾಲಿಕಲ್ ಕಿತಾಬು ಲಾರೈಬ ಫೀಹಿ, ಹುದಲ್ಲಿಲ್ ಮುತ್ತಖೀನ್** (ಅಲ್‌ಬಖರ: 03) **ಹುದಲ್ಲಿಸೈಯದೀನ್** ಎಂದು ಹೇಳಲಿಲ್ಲ. ಹೀಗಾಗಿ ಅಲ್ಲಾಹನು ತಖ್ವವನ್ನು ಮಾತ್ರ ಬಯಸುತ್ತಾನೆ. ಹೌದು, ಸೈಯದ್‌ಗಳಿಗೆ ಇತ್ತ ಕಡೆ ಗಮನಹರಿಸುವ ಅವಶ್ಯಕತೆ ಹೆಚ್ಚಿದೆ ಏಕೆಂದರೆ ಅವರು ಧರ್ಮನಿಷ್ಠರ ಮಕ್ಕಳಾಗಿದ್ದಾರೆ. ಆದುದರಿಂದಲೇ ಧರ್ಮನಿಷ್ಠರಾಗಲು ಪ್ರಯತ್ನಿಸುವುದು ಅವರ ಕರ್ತವ್ಯವಾಗಿದೆ. ಅವನು ಸೈಯದ್ ಆಗಿರುವುದು ಅವನಿಗೆ ಸ್ಥಾನ ನೀಡುತ್ತಿದೆ ಎಂದಲ್ಲ. ಅವರು ಹೇಳಿದರು: "ಆದ್ದರಿಂದ, ಇದು ಸಾದಾತ್ ಅವರ ಹಕ್ಕು ಎಂದು ಸರ್ವಶಕ್ತ ಅಲ್ಲಾಹನೊಂದಿಗೆ ಹೋರಾಡದೆ ಮೊದಲು ಬರುವುದು ಅವರ ಕರ್ತವ್ಯವಾಗಿದೆ." ಅವನು ಬಯಸಿದವರಿಗೆ ನೀಡುತ್ತಾನೆ. **ಝಾಲಿಕ ಫಝ್‌ಲುಲ್ಲಾಹಿ ಯುತೀಹಿ ಮೈಂಯಶಾಉ ವಲ್ಲಾಹು ಝುಲ್ ಫಝ್‌ಲಿಲ್ ಅಝೀಮ್** (ಅಲ್‌ಜುಮುಅ: 5) ಈ ವಿಷಯವೂ ಯಹೂದಿಯರು ಬನೀ ಇಸ್ಮಾಈಲ್ ಅವರಿಗೆ ಏಕೆ ನಬುವ್ವತ್ ನೀಡಲಾಯಿತು ಎಂದು ಹೇಳಿದಹಾಗೆ ಇದೆ. ಅವರಿಗೆ ಗೊತ್ತಿಲ್ಲ **ತಿಲ್‌ಕಲ್ ಅಯ್ಯಾಮು ನುದಾವಿಲುಹಾ ಬೈನನ್ನಾಸಿ** (ಆಲಿ ಇಮ್ರಾನ್: 141) ಯಾರಾದರೂ ಅಲ್ಲಾಹನನ್ನು ವಿರೋಧಿಸಿದರೆ ಅವನು ಮೃತನು. ಈ ಆಯತ್‌ನ ಅರ್ಥವೇನೆಂದರೆ: ಆ ದಿವಸಗಳನ್ನು ನಾವು ಜನರೆಡೆಯಲ್ಲಿ ಬದಲಿಸುತ್ತಿರುತ್ತೇವೆ, ಇದು ಅಲ್ಲಾಹನ ತೀರ್ಪಾಗಿದೆ. ಅವರು(ಅ) ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನೊಂದಿಗೆ ಯಾರಾದರು ವಿರೋಧಿಸಿದರೆ ಅವನು ಮೃತನಾಗಿದ್ದಾನೆ. ಅಲ್ಲಾಹನು ಪ್ರತಿಯೊಬ್ಬರನ್ನು ಪ್ರಶ್ನಿಸಬಹುದು ಆದರೆ ಯಾರೂ ಅವನನ್ನು ಪ್ರಶ್ನಿಸಲು ಸಾಧ್ಯವಿಲ್ಲ." (ಮಲ್‌ಫೂಝಾತ್, ಸಂಪುಟ–3, ಪುಟಗಳು 343 ರಿಂದ 345, ಆವೃತ್ತಿ 1984)

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ದಾವೆಯ ಆರೋಪಕ್ಕೆ ಪ್ರತಿಕ್ರಿಯೆಯಾಗಿ ಹೇಳುತ್ತಾರೆ: "ಪ್ರವಾದಿ ಮುಹಮ್ಮದ್(ಸ) ಅವರು ಆಗಮಿಸಿ ನಬುವ್ವತ್ತಿನ ದಾವೆ ಮಾಡಿದಾಗ ಜನರ ದೃಷ್ಠಿಯಲ್ಲಿ ಅನೇಕ ಯಹೂದಿ ವಿದ್ವಾಂಸರು ತಖ್ವದಲ್ಲಿ ಪ್ರಸಿದ್ಧರಾಗಿದ್ದರು ಇದರಿಂದ ಅವರೆಲ್ಲರು ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಮುತ್ತಖಿಯಾಗಿದ್ದಾರೆ ಎಂದಲ್ಲ. ಸರ್ವಶಕ್ತನಾದ ಅಲ್ಲಾಹನು ತನ್ನ ಮುಂದೆ ತಖ್ವ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವ ಧಾರ್ಮಿಕ ಜನರನ್ನು ಉಲ್ಲೇಖಿಸುತ್ತಾನೆ. ಅವರು ಪ್ರವಾದಿ(ಸ) ಅವರ ದಾವೆಯನ್ನು ಕೇಳಿದಾಗ, ಜನರು ಮತ್ತು ಅವರ ಉದ್ದೇಶದ ನಡುವೆ ವ್ಯತ್ಯಾಸವಿದೆ ಎಂದು ಕಂಡು, ಅವರು ಅದನ್ನು ಸ್ವೀಕರಿಸಲು ನಿರಾಕರಿಸಿದರು ಮತ್ತು ಸತ್ಯವನ್ನು ಒಪ್ಪಿಕೊಳ್ಳಲು ಬಯಸಲಿಲ್ಲ. ಈಗ ಅವರೆಲ್ಲರು ಜನರ ಮುಂದೆ ಮುತ್ತಖಿಯಾಗಿದ್ದರು ಆದರೆ ಅವರ ಹೆಸರು ನೈಜ ಮುತ್ತಖಿಯರು ಎಂದಿರಲಿಲ್ಲ.

ತಖ್ವದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಜಮಾಅತ್ತಿಗೆ ಸಲಹೆ ನೀಡುತ್ತಾ ಹೇಳುತ್ತಾರೆ: "ತಖ್ವ ಹೊಂದಿರುವವನ ಮೇಲೆ ಅಲ್ಲಾಹನ ಅಭಿವ್ಯಕ್ತಿ ಇರುತ್ತದೆ. ಅವನು ಅಲ್ಲಾಹನ ನೆರಳಿನಲ್ಲಿರುತ್ತಾನೆ, ಆದರೆ ತಖ್ವವು ಶುದ್ಧವಾಗಿರಬೇಕು ಮತ್ತು ಅದರಲ್ಲಿ ಸೈತಾನನ ಭಾಗವಿರಬಾರದು, ಇಲ್ಲದಿದ್ದರೆ ಶಿರ್ಕ್ ಸರ್ವಶಕ್ತನಾದ ಅಲ್ಲಾಹನಿಗೆ ಇಷ್ಟವಿಲ್ಲ ಮತ್ತು ಇದರಲ್ಲಿ ಸೈತಾನನ ಭಾಗವಿದ್ದರೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ ಇದು ಎಲ್ಲವೂ ಸೈತಾನನಿಗೆ ಸೇರಿದ್ದು. ಅವರು

ಹೇಳುತ್ತಾರೆ: "ನಾನು ಜಮಾಅತಿನ ಎಲ್ಲಾ ಸದಸ್ಯರಿಗೆ ಸಲಹೆ ನೀಡುವುದೇನೆಂದರೆ ನೀವೆಲ್ಲರು ಕೇವಲ ನಾವು ನಮಾಝ್ ನಿರ್ವಹಿಸುತ್ತೇವೆ, ಉಪವಾಸ ಅನುಷ್ಠಿಸುತ್ತೇವೆ ಮತ್ತು ವ್ಯಭಿಚಾರ, ಕಳ್ಳತನ ಮುಂತಾದ ಘೋರ ಅಪರಾಧಗಳನ್ನು ಮಾಡುವುದಿಲ್ಲ ಎಂದು ಸೊಕ್ಕಿನವರಾಗಬಾರದು. ಈ ಹೆಚ್ಚಿನ ಸದ್ಗುಣಗಳಲ್ಲಿ, ಪಂಥೀಯರಲ್ಲದವರು, ಬಹುದೇವತಾವಾದಿಗಳು ಇತ್ಯಾದಿಗಳನ್ನು ಸಹ ನಿಮ್ಮೊಂದಿಗೆ ಸೇರಿಸಲಾಗಿದೆ." ಅಂದರೆ, ಅವರು ಸಹ ಈ ವಿಷಯಗಳನ್ನು ಮಾಡುವುದಿಲ್ಲ. "ತಖ್ವದ ವಿಷಯವು ಸೂಕ್ಷ್ಮವಾಗಿದೆ, ಅದನ್ನು ಪಡೆಯಿರಿ. ಸರ್ವಶಕ್ತನಾದ ಅಲ್ಲಾಹನ ಮಹಿಮೆಯನ್ನು ನಿಮ್ಮ ಮನಸ್ಸುಗಳಲಲಿ ಇರಿಸಿಕೊಳ್ಳಿರಿ. ಯಾರ ಕರ್ಮಗಳಲ್ಲಿ ಬೂಟಾಟಿಕೆ ಇದೆಯೋ, ಅಲ್ಲಾಹನು ಅವನ ಕಾರ್ಯಗಳನ್ನು ಹಿಂದಿರುಗಿಸಿ ಅವನ ಮುಖಕ್ಕೆ ಹೊಡೆಯುತ್ತಾನೆ." ಮುತ್ತಖಿಯಾಗುವುದು ಬಹಳ ಕಷ್ಟದ ವಿಷಯವಾಗಿದೆ ಉದಾಹರಣೆಗೆ, ನೀವು ಪೆನ್ನನ್ನು ಕದ್ದಿದ್ದೀರಿ ಎಂದು ಯಾರಾದರೂ ಹೇಳಿದರೆ, ನೀವು ಯಾಕೆ ಕೋಪಗೊಳ್ಳುತ್ತೀರಿ?" ಇದು ಒಂದು ಚಿಕ್ಕ ವಿಷಯವಾಗಿದೆ. ಯಾರೋ ಹೇಳಿದರು ನೀನು ನನ್ನ ಪೆನ್ನು ಕದ್ದಿದೀಯ ಎಂದು ಹೇಳಿದಾಗ ಅವನು ಕೋಪಗೊಂಡರೆ ಅದು ಮುತ್ತಖಿಯರಿಗೆ ಸಂಕೇತವಲ್ಲ. ತಾಳ್ಮೆ ಮತ್ತು ಧೈರ್ಯವನ್ನು ತೋರಿಸಬೇಕು. ಅವರು ಹೇಳಿದರು, "ನಿಮ್ಮ ತಖ್ವವು ಅಲ್ಲಾಹನಿಗೆ ಮಾತ್ರ ಇದೆ." ನೀವು ಅದರಿಂದ ತಪ್ಪಿಸಿಕೊಳ್ಳಬೇಕು. ಕೋಪವನ್ನು ತಪ್ಪಿಸಬೇಕಾಗಿತ್ತು." "ಈ ಕೋಪ" ಅಸ್ತಿತ್ವದಲ್ಲಿಲ್ಲ ಎಂಬ ಅಂಶದಿಂದಾಗಿ ಅವನು ಮುತ್ತಖಿಯಾಗುವುದಿಲ್ಲ. ಪವಾಡಗಳು ಮತ್ತು ಇಲ್‌ಹಾಮ್‌ಗಳು ಸಹ ಮುತ್ತಖಿಯ ಶಾಖೆಯಾಗಿದೆ. ಆದರೆ ನಿಜವಾದ ವಸ್ತು ತಖ್ವ ಆಗಿದೆ. ಆದ್ದರಿಂದ, ಇಲ್‌ಹಾಮ್‌ಗಳು ಮತ್ತು ಪವಾಡಗಳನ್ನು ಅನುಸರಿಸಬೇಡಿ, ಆದರೆ ಮುತ್ತಖಿಯನ್ನು ಅನುಸರಿಸಿರಿ." ಒಬ್ಬನಿಗೆ ಇಲ್‌ಹಾಮ್‌ನಿಂದ ಪ್ರೇರೇಪಿಸಲ್ಪಟ್ಟಿದೆ ಮತ್ತು ಇನ್ನೊಬ್ಬನಿಗೆ ದೈವ ಸ್ವಪ್ನ ನೀಡಲಾಗಿದೆ ಎಂಬುದನ್ನು ನೋಡಬಾರದು ಬದಲಿಗೆ ತಖ್ವ ಎಂದರೇನು ಎಂಬುದನ್ನು ನೋಡಬೇಕು. ಮುತ್ತಖೀಯರ ಇಲ್‌ಹಾಮ್‌ಗಳು ಮಾತ್ರ ನಿಜವಾಗಿರುತ್ತದೆ ಮತ್ತು ತಖ್ವ ಇಲ್ಲದಿದ್ದರೆ ಆತನ ಇಲ್‌ಹಾಮ್‌ಗಳು ಸಹ ವಿಶ್ವಾಸಾರ್ಹವಲ್ಲ. ಅದರಲ್ಲಿ ಸೈತಾನನ ಭಾಗವಾಗಿರಬಹುದು. ಓರ್ವ ವ್ಯಕ್ತಿಯ ತಖ್ವವನ್ನು ಅವರ ಇಲ್‌ಹಾಮ್‌ನಿಂದ ಗುರುತಿಸಬೇಡಿ, ಆದರೆ ಅವರ ಇಲ್‌ಹಾಮ್‌ಗಳನ್ನು ಆತನ ತಖ್ವದೊಂದಿಗೆ ಪರೀಕ್ಷಿಸಿ ಮತ್ತು ಮೌಲ್ಯಮಾಪನ ಮಾಡಿರಿ. ಮುಂದೆ ಹೇಳಿದರು: ತಖ್ವದ ಮಾರ್ಗವನ್ನು ಕಲಿಸುವುದೇ ಎಲ್ಲ ಪ್ರವಾದಿಗಳ ಉದ್ದೇಶವಾಗಿತ್ತು. **ಇನ್ ಔಲಿಯಾಉಹೂ ಇಲ್ಲಲ್ ಮುತ್ತಖೀನ್** (ಅಲ್ ಅನ್‌ಫಾಲ್). ಎಂದರೆ, ಭಯಭಕ್ತಿಯನ್ನು ತೋರಿಸುವವರೇ ಅದರ ಸಂರಕ್ಷಕರು. ಆದರೆ ಪವಿತ್ರ ಖುರ್‌ಆನ್ ತಖ್ವದ ಅತಿಸೂಕ್ಷ್ಮವಾದ ಮಾರ್ಗಗಳನ್ನು ಕಲಿಸಿಕೊಟ್ಟಿದೆ. ಒಟ್ಟಿನಲ್ಲಿ ತಖ್ವದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಪ್ರತಿಯೊಂದು ಕಷ್ಟತೆಗಳನ್ನು ಸಹಿಸಲು ತಯಾರಾಗಬೇಕು. ಮನುಷ್ಯನು ಈ ಮಾರ್ಗದಲ್ಲಿ ಹೆಜ್ಜೆಹಾಕುವಾಗ ಶೈತಾನನು ಅವನ ಮೇಲೆ ದೊಡ್ಡ ದೊಡ್ಡ ದಾಳಿಗಳನ್ನು ಮಾಡುತ್ತಾನೆ. ಆದರೆ ಒಂದು ಮಿತಿಯ ನಂತರ ಶೈತಾನನು ನಿಂತುಬಿಡುತ್ತಾನೆ. ಆ ಘಟ್ಟಕ್ಕೆ ತಲುಪುವಾಗ ಮನುಷ್ಯನ ಕೆಟ್ಟ ಜೀವಿತ ಸತ್ತುಹೋಗಿ ಅವನು ಅಲ್ಲಾಹನ ನೆರಳಲ್ಲಿ ಆಗುತ್ತಾನೆ. ಮನುಷ್ಯನು ತನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಅಲ್ಲಾಹನ ಕಡೆಗೆ ಖರ್ಚು ಮಾಡಬೇಕು ಎಂಬುದೇ ನಮ್ಮ ಬೋಧನೆಗಳ ಸಂಕ್ಷೇಪವಾದ ತಿರುಳು. (ಮಲ್‌ಫೂಝಾತ್, ಸಂಪುಟ-2, ಪುಟ-301-302, 1984 ಆವೃತ್ತಿ)

ಅನೇಕ ಮಗ್ಗಲುಗಳಿಂದ ಹಝ್ರತ್ ಮಸೀಹ್ ಮೌಊದ್(ಅ) ನಮ್ಮನ್ನು ಉಪದೇಶಿಸಿರುವರು. ನಮಗೆ ತಖ್ವದ ಅರ್ಥ ಮತ್ತು ಅದರ ಆಳವಾದ ತಾತ್ಪರ್ಯದ ಅರಿವು ಕೂಡ ಲಭಿಸಲಿಕ್ಕಾಗಿ ನಾನು ಅವುಗಳಿಂದ ಕೆಲವು ಉಲ್ಲೇಖಗಳನ್ನು ಮುಂದಿರಿಸಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ನಾವು ಅವರ ಜಮಾಅತಿನಲ್ಲಿ ಸೇರಿಕೊಂಡು ತಖ್ವದ ನಿಜವಾದ ತಿರುಳನ್ನು ಮನವರಿಕೆ ಮಾಡುತ್ತಾ ಅದರಂತೆ ನಡೆಯುವವರಾಗಲಿ. ತಖ್ವದ ನೈಜತೆಯನ್ನು ಅರಿಯುತ್ತಾ ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಅವನ ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಸಾಧ್ಯವಾದಷ್ಟು ಮಾಡಲು ರಮಝಾನಿನ ಉಳಿದ ದಿನಗಳಲ್ಲಿ ಪ್ರಯತ್ನ ಮಾಡಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

***************


**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**


ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹೇಳಿರುತ್ತಿದ್ದರೆ, ನಾವು ಆತನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು. ಅನಂತರ ನಾವು ಆತನ ಜೀವನಾಡಿಯನ್ನೇ ಕೊಯ್ದುಬಿಡುತ್ತಿದ್ದೆವು. ಆಗ ಅದನ್ನು ತಡೆಯಬಲ್ಲವನು ಯಾರೂ ನಿಮ್ಮಲ್ಲಿ ಇಲ್ಲ. ಅಂದರೆ ಅವನು ನಮ್ಮ ಮೇಲೆ ಸುಳ್ಳು ಹೇಳುವಂತಿದ್ದರೆ ಶಿಕ್ಷೆ ಮರಣವೆ ಆಗಿತ್ತು. ಏಕೆಂದರೆ ಆ ಮೂಲಕ ತನ್ನ ಸುಳ್ಳುವಾದದಿಂದ ಅವಿಶ್ವಾಸದ ಕಡೆಗೆ ಆಹ್ವಾನಿಸಿ ದಾರಿ ತಪ್ಪುವವರ ಮರಣಕ್ಕೆ ಜನರನ್ನು ದೂಡಬಯಸುತ್ತಿದ್ದ. ಅವನಿಂದ ಈ ಲೋಕ ದಾರಿ ತಪ್ಪಿ ವಿನಾಶಗೊಳ್ಳುವುದಕ್ಕಿಂತ ಅವನ ಮರಣವೇ ಲೇಸು. ಆದುದರಿಂದ ನಾವು ಅವನನ್ನು ವಿನಾಶಗೊಳಿಸುತ್ತೇವೆ. ಅದು ನಮ್ಮ ಪುರಾತನ ಕಾಲದಿಂದ ನಡೆದು ಬಂದ ಸುನ್ನತ್ (ವಾಡಿಕೆ) ಆಗಿದೆ.

ಮೌಲ್ವಿ ರಹಮತುಲ್ಲಾಹ್ ಸಾಹಿಬ್ ಮತ್ತು ಮೌಲ್ವಿ ಸಯ್ಯದ್ ಆಲ್ ಹಸನ್ ಸಾಹಿಬ್ ಅವರು ಪಾದರಿ ಫಂಡಲ್ ಅವರ ಮುಂದೆ ಅದೇ ಪುರಾವೆ ಮಂಡಿಸಿದ್ದರು. ಆಗ ಪಾದರಿ ಫಂಡಲ್ ಸಾಹಿಬ್‌ರವರಿಗೆ ಅದರ ಉತ್ತರ ನೀಡಲಾಗಿರಲಿಲ್ಲ.

ಸಯ್ಯದ್‌ನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದೀಗ ಈ ವಚನಗಳಿಂದ ಸ್ಪಷ್ಟವಾಗಿದೆ. ಅಲ್ಲಾಹನು ಹೇಳುವನು. ಹಝ್ರತ್ ರಸೂಲುಲ್ಲಾಹ್(ಸ) ನಮ್ಮ ಕಡೆಯಿಂದ ಅವತರಿಸಲ್ಪಡದಿದ್ದರೆ ನಾವು ಅವರನ್ನು ವಿನಾಶಗೊಳಿಸುತ್ತಿದ್ದೆವು. ಅವರು ಬದುಕಿರಲು ಸಾಧ್ಯವಿರಲಿಲ್ಲ. ನೀವು ಅವರನ್ನು ರಕ್ಷಿಸಲು ಪ್ರಯತ್ನಪಟ್ಟರೂ ಸಫಲವಾಗುತ್ತಿರಲಿಲ್ಲ. ಆದರೆ ಹಾಫಿಝ್ ಸಾಹಿಬರು ಈ ಸಾಕ್ಷ್ಯವನ್ನು ಮನ್ನಿಸುವುದಿಲ್ಲ. ಅವರು ಹೇಳುತ್ತಾರೆ ಹಝ್ರತ್ ರಸೂಲುಲ್ಲಾಹ್(ಸ) ರವರ ದಿವ್ಯವಾಣಿಯ ಎಲ್ಲಾ ಮಹಾನತೆಗಳ ಅವಧಿ 23 ವರ್ಷಗಳದ್ದಾಗಿತ್ತು. ನಾನು ಅದಕ್ಕಿಂತ ಹೆಚ್ಚು ಅವಧಿಯವರೆಗಿನ ಜನರನ್ನು ತೋರಿಸಬಲ್ಲೆ. ಅವರು ಸುಳ್ಳು ಪ್ರವಾದಿಯ ವಾದ ಮಂಡಿಸಿದ್ದರು. ಅದರೂ ಆ ಸುಳ್ಳಿನ ಜೊತೆ ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳುತ್ತಾ 23 ವರ್ಷಗಳಿಂದ ಹೆಚ್ಚು ಅವಧಿ ಕಳೆದರು. ಅಂತೂ ಹಾಫಿಝ್ ಸಾಹಿಬ್ ಅವರ ದೃಷ್ಟಿಯಲ್ಲಿ ಪವಿತ್ರ ಖುರ್‌ಆನ್‌ನ ಈ ಸಾಕ್ಷ್ಯ ಮಿಥ್ಯ ಎಂದಾಯಿತು. ಅದರಿಂದ ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರವಾದಿತ್ವ ಸಾಬೀತಾಗುವುದಿಲ್ಲ. ಆದರೆ ಆಶ್ಚರ್ಯದ ವಿಷಯವೇನೆಂದರೆ ದಿವಂಗ ಮೌಲ್ವಿ ರಹಮತುಲ್ಲಾಹ್ ಸಾಹಿಬ್ ಮತ್ತು ದಿವಂಗತ ಮೌಲ್ವಿ ಸಯ್ಯದ್ ಆಲ್ ಹಸನ್ ಸಾಹಿಬ್ ತನ್ನ ಗ್ರಂಥ ಇಝಾಲ ಅವ್‌ಹಾಮ್ ಮತ್ತು ಇಸ್‌ತಫ್‌ಸಾರಿಯಲ್ಲಿ ಪಾದರ್ ಪಂಡಲ್ ಅವರ ಮುಂದೆ ಅದೇ ಮಾತು ಮಂಡಿಸಿದರು. ಆಗ ಪಾದರ್ ಫಂಡಲ್ ಸಾಹಿಬರಿಗೆ ಅದರ ಉತ್ತರ ನೀಡಲು ಸಾಧ್ಯವಾಗಿರಲಿಲ್ಲ. ಅವರುಗಳು ಇತಿಹಾಸದ ಮೇಲೆ ಪ್ರಭುತ್ವ ಹೊಂದಿದ್ದರು. ಆದರೂ ಈ ಸಾಕ್ಷ್ಯ ಸುಳ್ಳಾಗಿಸಲು ಯಾವ ಉದಾಹರಣೆಯನ್ನು ಮಂಡಿಸಲು ಆಗಿರಲಿಲ್ಲ. ಮತ್ತು ಉತ್ತರ ನೀಡದಂತಾಯಿತು. ಇಂದು ಹಾಫಿಝ್ ಮುಹಮ್ಮದ್ ಯೂಸೂಫ್ ಸಾಹಿಬ್ ಮುಸಲ್ಮಾರ ಪುತ್ರ ಎನಿಸಿಕೊಂಡು. ಈ ಖುರ್‌ಆನ್‌ನ ಸಾಕ್ಷ್ಯವನ್ನು ಅಲ್ಲಗಳೆಯುತ್ತಿದ್ದಾರೆ. ಈ ಮಾತು ಕೇವಲ ಮೂರ್ಖರ ರೂಪಕ್ಕೆ ಸಂಬಂಧಿಸಿದ್ದಲ್ಲ. ಬದಲು ಅಂತಹ ಬರಹಗಳು ಸಹ ನಮ್ಮಲ್ಲಿವೆ. ಅದರ ಮೇಲೆ ಹಾಫಿಝ್ ಸಾಹಿಬ್ ಅವರ ಹಸ್ತಾಕ್ಷರವಿದೆ. ಅವರು ಸಹ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬರಿಗೆ ಈ ವಚನದ ಬದ್ಧತೆಗೆ ಜೊತೆಗೂಡಿದ್ದರು. ನಾವು ಅಂತಹ ಸುಳ್ಳುವಾದಿಗಳ ಸಾಕ್ಷ್ಯ ನೀಡುವೆವು. ಅವರು ಅಲ್ಲಾಹನ ನಬಿ ಅಥವಾ ರಸೂಲ್‌ಗಳ ವಾದ ಮಂಡಿಸಿಯೂ ಆ ವಾದದ ನಂತರ 23 ವರ್ಷಗಳಿಗಿಂತ ಹೆಚ್ಚು ಬದುಕಿದ್ದರು. ಖುರ್‌ಆನ್‌ನ ಸಾಕ್ಷ್ಯಗಳನ್ನು ಸುಲ್ಲಾಗಿಸುವುದು ಖುರ್‌ಆನ್ನು ಸುಳ್ಳಾಗಿಸಿದಂತೆ.

ಸಯ್ಯದ್‌ನಾ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೆನಪಿರಲಿ. ಇವರು ಮೌಲ್ವಿ ಅಬ್ದುಲ್ಲ ಸಾಹಿಬ್ ಗಝ್‌ವಿ ಪ್ರಸಿದ್ಧಿ ಪಡೆದಿದ್ದರು. ಅವರ ವಿಶ್ವಾಸದ ಕೆಲ ನಮೂನೆಗಳು ಹೀಗಿವೆ. ಅದನ್ನು ನಾನು ಬರೆದಿದ್ದೇನೆ. ಈ ಮಾತು ಯಾರಿಂದಲೂ ಗೌಪ್ಯವಾಗಿ ಉಳಿದಿಲ್ಲ. ಖುರ್‌ಆನ್ ಮಂಡಿಸಿದ ಸಾಕ್ಷ್ಯಗಳನ್ನು ಸುಳ್ಳಾಗಿಸುವುದೆಂದರೆ, ಖುರ್‌ಆನ್‌ನ್ನು ಸುಳ್ಳಾಗಿಸಿದಂತೆ. ಪವಿತ್ರ ಖುರ್‌ಆನ್‌ನ ಒಂದು ಪುರಾವೆಯನ್ನು ರದ್ದುಗೊಳಿಸಿದರೆ ಶಾಂತಿಭಂಗವಾದಂತೆಯೇ ಸರಿ ಮತ್ತು ಅದರಿಂದ ರುಜುವಾಗುವುದೇನೆಂದರೆ ಏಕದೇವತ್ವ ಮತ್ತು ಪ್ರವಾದಿತ್ವ ಸತ್ಯತೆಗೆ ಕುರಿತಾದ ಎಲ್ಲ ಸಾಕ್ಷ್ಯಗಲು ಮಿಥ್ಯವಾಗಿವೆ ಎಂದಾಗುವುದು. ಈಗಂತೂ ಹಾಫಿಝ್ ಸಾಹಿಬ್‌ರು ಆ ಸಾಕ್ಷ್ಯ ರದ್ದುಪಡಿಸಲು ಎತ್ತಿದ ಸಾಕ್ಷ್ಯವೆಂದರೆ- 23 ವರ್ಷಗಳವರೆಗೆ ಅಥವಾ ಅದಕ್ಕಿಂತ ಹೆಚ್ಚು ಅವಧಿ ಸುಳ್ಳು ಪ್ರವಾದಿತ್ವದ ದಾವೆ ಮಾಡಿಯೂ ಬದುಕಿರುತ್ತಾರೆ. ನಾಳೆ ಬಹುಶಃ ಹಾಫಿಝ್ ಸಾಹಿಬ್ ಇದು ಸಹ ಹೇಳಬಹುದು. ಖುರ್‌ಆನ್ ವ್ಯಕ್ತಪಡಿಸಿದ ಈ ಸಾಕ್ಷ್ಯ "ಲೌ ಕಾನ ಫೀಹಿಮಾ ಆಲಿಹತುನ್ ಇಲ್ಲಲ್ಲಾಹು ಲಫಸದತಾ" ಮಿಥ್ಯವಾಗಿದೆ.

ಮತ್ತು ನಾನು ದಾವೆ ಸಾರಿ ಹೇಳುವೆನು. ಅಲ್ಲಾಹನ ಹೊರತು ಸಹ ಇನ್ನು ಕೆಲವು ದೇವರುಗಳು ಇವೆ. ಅವು ಸತ್ಯವಾಗಿದೆ. ಆದರೂ ಸಹ ಭೂಯ್ಯಾಕಾಶ ಇಂದಿಗೂ ಉಪಸ್ಥಿತವಿದೆ. ಅಂದ ಹಾಗೆ ಹಾಫಿಝ್ ಸಾಹಿಬ್‌ರಿಂದ ಏನು ಬೇಕಾದರೂ ನಿರೀಕ್ಷಿಸಬಹುದು. ಆದರೆ ಒಬ್ಬ ಸತ್ಯ ವಿಶ್ವಾಸಿಯ ಶರೀರ ಅಂತಹ ಮಾತುಗಳಿಂದ ಕಂಪನ ಉಂಟಾಗುತ್ತದೆ. ಒಬ್ಬರು ಖುರ್‌ಆನ್ ವ್ಯಕ್ತಪಡಿಸಿದ ಸಾಕ್ಷ್ಯಗಳನ್ನು ಪ್ರಕೃತಿಗೆ ವಿರೋಧವಾಗಿದೆ ಎಂದಾಗ, ಅದರ ಸಾಕ್ಷ್ಯಗಳು ಮಿಥ್ಯವಾಗಿವೆ ಎಂದಾಗ, ಖುರ್‌ಆನ್ ಮತ್ತು ರಸೂಲೆ ಕರೀಂ(ಸ) ರವರ ಮೇಲೆ ಅಪವಾದವಾದಂತಹ ವಿಷಯಗಳನ್ನು ಮನ್ನಿಸುವುದು ಸತ್ಯವಿಶ್ವಾಸಿಯ ಕಾರ್ಯವಲ್ಲ. ಅಂತಹ ಅಶ್ಲೀಲ ಮಾರ್ಗ ಹಿಡಿಯಲು ಸಾಧ್ಯವಿಲ್ಲ. ಹಾಫೀಝ್ ಸಾಹಿಬರ ಸ್ಥಿತಿ ಈ ಮಟ್ಟಕ್ಕೆ ತಲುಪಲು ಅವರ ಮಿತ್ರರ ಅನುಸರಣೆಯಾಗಿದೆ. ಹಾಗೆ ಅಲ್ಲಾಹನಿಂದ ಅವತರಿಸಿದ ವಿಷಯ ನಿರಾಕರಿಸುವುದೇ ಉಚಿತ ಎಂದು ಭಾವಿಸಿದ, ಸುಳ್ಳುಗಾರರಿಗೆ ಅಲ್ಲಾಹನು ಇಹಲೋಕದಲ್ಲಿಯೇ ಅಪರಾಧಿಯನ್ನಾಗಿ ಮತ್ತು ಅಪಮಾನಿತನಾಗಿ ಮಾಡುತ್ತಾನೆ. ಆದುದರಿಂದ ಹಾಫಿಝ್ ಸಾಹಿಬರು ಸಹ ಧಿಕ್ಕರಿಸುವವರ ರೀತಿ ಅಲ್ಲಾಹನ ಅಪರಾಧಿತ್ವಕ್ಕೆ ಒಳಗಾದರು.

ಖುರ್‌ಆನ್ ಮಂಡಿಸಿದ ಸಾಕ್ಷ್ಯಗಳು ಅದನ್ನು ತಳ್ಳಲಾಗದಂತಹ ಕಾಯಿದೆ ಎಂದು ಮನ್ನಿಸಿದಾಗ ಮಾತ್ರ ಅದರ ಸತ್ಯತೆ ಕಾಣಲು ಸಾಧ್ಯ.

ಸಯ್ಯದ್‌ನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಬಿಚ್ಚಿಟ್ಟು ಖಡ್ಗದಂತೆ ಈ ಆದೇಶ ಹೊರಡಿಸುತ್ತಾನೆ. ಈ ನಬಿ ನನ್ನ ಮೇಲೆ ಸುಳ್ಳು ಸೃಷ್ಟಿಸಿದಂತಾದರೆ, ಯಾವುದೇ ಮಾತಿನಲ್ಲಿ ಸುಳ್ಳು ಹೇಳುವಂತಾದರೆ ನಾನು ಅವನ ಜೀವನಾಡಿಯೇ ಕೊಯ್ದು ಬಿಡುವೆನು. ಮತ್ತು ದೀರ್ಘ ಕಾಲದವರೆಗೆ ಬದುಕಲು ಬಿಡೆನು. ಇದೀಗ ನನ್ನ ವಾಗ್ದತ್ತ ಮಸೀಹರ ವಾದ ಈ ಮಾನದಂಡಕ್ಕೆ ಹೋಲಿಸಿದಾಗ, ಬರಾಹೀನ್ ಅಹ್ಮದಿಯಾ ನೋಡುವುದರಿಂದ ಸಾಬೀತಾಗುತ್ತದೆ. ಅಲ್ಲಾಹನಿಂದ ಅವತರಿಸಿದ ಮತ್ತು ಅವನಿಂದ ಪಡೆದ ದಿವ್ಯವಾಣಿಗಳು ಸುಮಾರು 30 ವರ್ಷಗಳಿಂದ ಆಗಿವೆ. 21 ವರ್ಷಗಳು ಬರಾಹೀನ್ ಅಹ್ಮದಿಯಾ ಮುದ್ರಣಗೊಂಡು ಕಳೆದಾಗಿದೆ. ಈ ಅವಧಿಯವರೆಗೂ ಮಸೀಹನು ವಿನಾಶದಿಂದ ರಕ್ಷಿಸಲ್ಪಟ್ಟು ಸುರಕ್ಷಿತವಾಗಿದ್ದು ಸತ್ಯತೆಗೆ ಸಾಕ್ಷ್ಯವಲ್ಲ ಎಂದಾದರೆ ಒಪ್ಪಬೇಕಾಗುತ್ತದೆ. **ನೌಝುಬಿಲ್ಲಾಹ್** ರಸೂಲುಲ್ಲಾಹ್(ಸ) ರವರ 23 ವರ್ಷಗಳು ಮರಣದಿಂದ ಸುರಕ್ಷಿತವಾಗಿದ್ದು ಸತ್ಯತೆಗೆ ಕಾರಣವಲ್ಲ. ಏಕೆಂದರೆ ಇಲ್ಲಿ ಅಲ್ಲಾಹನು ಒಬ್ಬ ಸುಳ್ಳುಗಾರನಿಗೆ 30 ವರ್ಷಗಳ ಅವಕಾಶ ಒದಗಿಸಿಕೊಟ್ಟನು. ಮತ್ತು ವಲ್ ತಖವ್ವಲ್ ಅಲೈನ ವಾಗ್ದಾನ ಮರೆತು ಹೋಯಿತು. ಅದೇ ರೀತಿ **ವಲೌತಖವ್ವಲ ಅಲೈನ** ಭಾವಿಸಬಹುದು. ಹಝ್ರತ್ ರಸೂಲುಲ್ಲಾಹ್(ಸ) ರವರಿಗೂ ಸಹ ಸುಳ್ಳುವಾದಿಯಾದರೂ ಅವಕಾಶ ನೀಡಿದನು. ಆದರೆ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಸುಳ್ಳುಗಾರರೆನ್ನುವುದು ದುಸ್ತರವಾಗಿದೆ. ಹಾಗೆ ಸಾಕ್ಷ್ಯಗಳನ್ನು ದುಸ್ತರಗೊಳಿಸಲು ನೀಡುವ ಸಾಕ್ಷ್ಯಗಳು ಸಹ ದುಸ್ತರವಾಗಿರುತ್ತವೆ. ಇದು ಸ್ಪಷ್ಟವಾದ ಮತ್ತು ಅಲ್ಲಗಳೆಯಲಾಗದ ಸತ್ಯವಾಗಿದೆ. ಖುರ್‌ಆನ್‌ನ ಎಲ್ಲ ಸಾಕ್ಷ್ಯಗಳು ಅಳಿಯಲಾಗದಂತಹ ಕಾನೂನುಗಳು ಎಂದು ಮನ್ನಿಸಬೇಕಾಗುತ್ತದೆ. ತನ್ನ ದಾಸರ ದಾರಿ ತಪ್ಪಿಸುವಂತಹ ಮಿಥ್ಯವಾದಿಗಳಿಗೆ ಅಲ್ಲಾಹನು ಎಂದೂ ಅವಕಾಶ ನಿಡುವುದಿಲ್ಲ. ಏಕೆಂದರೆ ಅದರಿಂದ ಅವನ ಪ್ರಭುತ್ವದಲ್ಲಿ ಕುಂದುಂಟಾದಂತೆ ಆಗುತ್ತದೆ. ಮತ್ತು ಸತ್ಯ ಮಿಥ್ಯದಲ್ಲಿ ಅಂತರ ಬಾಕಿ ಉಳಿಯುವುದಿಲ್ಲ. ಹಾಗೆ ಈ ವಚನದ ಪರವಾಗಿ ನನ್ನ ದಾವೆ ಮಂಡಿಸಿದಾಗ ಹಾಫಿಝ್ ಸಾಹಿಬ್ ಈ ಮಾತನ್ನು ತಳ್ಳಿ ಹಾಕಿದರು ಮತ್ತು ಈ ಮಾತನ್ನು ಬಲವಾಗಿ ಸಮರ್ಥಿಸಲು ಹೊರಟರು. ಸುಳ್ಳುಗಾರನು 23 ವರ್ಷಗಳು ಮತ್ತು ಅದಕ್ಕಿಂತ ಹೆಚ್ಚು ಕಾಲ ಜೀವಿತದಲ್ಲಿರಬಹುದಾಗಿದೆ. ನಾನು ಅಂತಹ ಮಿಥ್ಯಾವಾದಿಗಳ ಉದಾಹರಣೆ ಪ್ರಸ್ತುತಪಡಿಸುವೆನು. ಅವರು ಮಿಥ್ಯ ಪ್ರವಾದಿಗಳ ವಾದ ಮಾಡಿಯೂ 23 ವರ್ಷಗಳು ಅದಕ್ಕಿಂತ ಹೆಚ್ಚು ಕಾಲ ಬದುಕುಳಿದರು. ಆದರೆ ಇಲ್ಲಿಯವರೆಗೆ ಯಾವ ಉದಾಹರಣೆಯೂ ಪ್ರಸ್ತುತಪಡಿಸಲಿಲ್ಲ.

ಇಲ್ಲಿಯವರೆಗೂ ಯಾರೊಬ್ಬರೂ ಸಹ ಸುಳ್ಳುವಾದಿಯು 23 ವರ್ಷಗಳು ಬದುಕುಳಿಯಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಲಿಲ್ಲ.

ಸಯ್ಯದ್‌ನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಯಾರಿಗೆ ಇಸ್ಲಾಮಿನ ಗ್ರಂಥಗಳ ಮೇಲೆ ದೃಷ್ಟಿ ಇದೆಯೋ ಅವರು ಚೆನ್ನಾಗಿ ಬಲ್ಲರು. ಇಲ್ಲಿಯವರೆಗೂ ಸಮುದಾಯದ ಉಲಮಾಗಳಿಂದ ಯಾರೂ ಸಹ ಈ ವಿಶ್ವಾಸ ವ್ಯಕ್ತಪಡಿಸಿಲ್ಲ. ಅಲ್ಲಾಹನ ಹೆಸರಿನಲ್ಲಿ ಒಬ್ಬನು ಹಝ್ರತ್ ರಸೂಲುಲ್ಲಾಹ್(ಸ) ರವರಂತೆ 23 ವರ್ಷಗಳವರೆಗೆ, ಸುಳ್ಳು ಹೇಳಿ ಬದುಕಬಹುದೆಂದು ಬದಲು ಅದು ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಮಾಡಿದ ಘೋರ ಅಪಮಾನ, ಹಲ್ಲೆ ಹಾಗೂ ಅಸಭ್ಯ ವರ್ತನೆಯಾಗಿರುತ್ತದೆ. ಮತ್ತು ಅಲ್ಲಾಹನು ವ್ಯಕ್ತಪಡಿಸಿದ ಸಾಕ್ಷ್ಯಗಳಿಗೆ ವಕ್ರ ದೃಷ್ಟಿಯಿಂದ ನೋಡುವಂತಾಗುತ್ತದೆ. ಹೌದು ಅದರ ಸಾಕ್ಷ್ಯ ಕೇಳುವುದು ಅವರ ಹಕ್ಕಾಗಿತ್ತು.

ನಾನು ಅಲ್ಲಾಹನಿಂದ ಅವತರಿಸಲ್ಪಟ್ಟು 23 ವರ್ಷಗಳ ಕಾಲ ಇಲ್ಲಿಯವರೆಎಗ ಆಗಿದೆಯೇ ಇಲ್ಲ. ಆದರೆ ಹಾಫಿಝ್ ಸಾಹಿಬ್ ನನ್ನಿಂದ ಈ ಸಾಕ್ಷ್ಯ ಕೇಳಲಿಲ್ಲ. ಏಕೆಂದರೆ ಹಾಫಿಝ್ ಸಾಹಿಬ್ ಅವರು ಮಾತ್ರವಲ್ಲ, ಎಲ್ಲ ಇಸ್ಲಾಮಿನ ಉಲಮಾಅಗಳು, ಹಿಂದೂ ಮತ್ತು ಕ್ರೈಸ್ತರು ಈ ಮಾತು ಬಲ್ಲವರಾಗಿದ್ದಾರೆ. ಬರಾಹಿನ್ ಅಹ್ಮದಿಯಾ ಅದರಲ್ಲಿ ಈ ದಾವೆ ಇದೆ. ಅದರಲ್ಲಿ ಹಲವು ದಿವ್ಯವಾಣಿಗಳು ನಮೂದಿಸಲ್ಪಟ್ಟಿವೆ ಮತ್ತು ಅವು ಮುದ್ರಣಗೊಂಡು 21 ವರ್ಷಗಳು ಕಳೆದಿವೆ. ಅದರಿಂದಲೇ ಸ್ಪಷ್ಟವಾಗುತ್ತದೆ. ಸುಮಾರು ಮೂವತ್ತು ವರ್ಷಗಳಿಂದ ದೈವಿಕ ಸಂಭಾಷಣೆಗಳ ವಿವರ ಮುದ್ರಣಗೊಳಿಸಲ್ಪಟ್ಟಿವೆ. ಅನಗತ್ಯವಾಗಿ ಖುರ್‌ಆನ್‌ನ ಸಾಕ್ಷ್ಯಗಳ ಮೇಲೆ ಹಲ್ಲೆ ಮಾಡಲಾಯಿತು.

ಉದಾಹರಣೆ ಜನಜನಿತವಾಗಿದೆ. "ಸಾಯಲು ಹೊರಟವನು ಏನಾದರೂ ಮಾಡಬಲ್ಲನು."

ಖುರ್‌ಆನ್‌ನ ಸಾಕ್ಷ್ಯ ಎಂದೂ ಮುರಿಯಲು ಸಾಧ್ಯವಿಲ್ಲ. ಅದು ಅಲ್ಲಾಹನಿಂದ ಮಂಡಿಸಿದ ಸಾಕ್ಷ್ಯವಾಗಿದೆ. ಆದ್ದರಿಂದ ಈ ಸಾಕ್ಷ್ಯವನ್ನು ತಳ್ಳಿ ಹಾಕಲು ಹಾಫಿಝ್ ಸಾಹೇಬರ ಸಾಮರ್ಥ್ಯ, ತಾಕತ್ತಾದರೂ ಏನು?

ಹಾಗೆ ಈ ಜಾಹೀರಾತಿನಲ್ಲಿ ನಾವು ಹಾಫಿಝ್ ಮುಹಮ್ಮದ್ ಯೂಸೂಫ್ ಸಾಹಿಬ್‌ರಿಂದ ಆ ಉದಾಹರಣೆ ಕೇಳಬಯಸುತ್ತೇವೆ. ಅದನ್ನು ಅವರು ಪ್ರಸ್ತುತಪಡಿಸಲು ತನ್ನ ಹಸ್ತಾಕ್ಷರದೊಂದಿಗೆ ವಾಗ್ದಾನ ನೀಡಿದ್ದರು. ನಾವು ದಿಟವಾಗಿಯೂ ಬಲ್ಲವರಾಗಿದ್ದೇವೆ. ಖುರ್‌ಆನ್‌ನ ಸಾಕ್ಷ್ಯ ಎಂದೂ ಮುರಿಯಲು ಸಾಧ್ಯವಿಲ್ಲ ಅದು ಅಲ್ಲಾಹನು ಮಂಡಿಸಿದ ಸಾಕ್ಷ್ಯವಾಗಿದೆಯೇ ಹೊರತು ಮನುಷ್ಯನದ್ದಲ್ಲ. ಹಣೆಬರಹ ಕೆಟ್ಟವರು ಲೋಕದಲ್ಲಿ ಬಂದರು ಮತ್ತು ಅವರು ಖುರ್‌ಆನ್‌ನ ಈ ಸಾಕ್ಷ್ಯ ಮುರಿದು ಹಾಕಲು ಬಯಸಿದರು. ಆದರೆ ತಾವೇ ಈ ಲೋಕವನ್ನು ತ್ಯಜಿಸಿ ಹೋದರು. ಆದರೆ ಸಾಕ್ಷ್ಯವು ಮುರಿಯಲಿಲ್ಲ. ಹಾಫಿಝ್ ಸಾಹಿಬ್ ಅಜ್ಞಾನಿಗಳಾಗಿದ್ದಾರೆ. ಅವರಿಗೆ ಗೊತ್ತೋ ಇಲ್ಲವೋ. ಸಾವಿರಾರು ಹೆಸರಾಂತ ಉಲಮಾ ಮತ್ತು ಅಲಿಮ್‌ಗಳು ಸದಾಕಾಲಕ್ಕು ಅದೇ ಸಾಕ್ಷ್ಯ ಅವಿಶ್ವಾಸಿಗಳ ಮುಂದೆ ಮಂಡಿಸಿದರು. ಯಾವ ಕ್ರೈಸ್ತ ಅಥವಾ ಯಹೂದಿಯವನಿಗೆ ಅಂತಹ ವ್ಯಕ್ತಿಯೊಬ್ಬನನ್ನು ಹುಡುಕಿಕೊಡಲು ಸಾಧ್ಯವಾಗಲಿಲ್ಲ. ಅವನು ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳಿಯೂ 3 ವರ್ಷಗಳು ಪೂರ್ಣಗೊಳಿಸಿರಬೇಕು. ಹೀಗಿರುವಾಗ ಹಾಫಿಝ್ ಸಾಹೇಬರ ಮಾತೇನೂ ಅವರ ತಾಕತ್ತೇನು ಈ ಸಾಕ್ಷ್ಯವನ್ನು ಅಲ್ಲಗಳೆಯಲು. (ಝಮೀಮ ತೊಹಫ ಗೊಲಡ್ವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–38 ರಿಂದ 44)

ಈ ಸಂಬಂಧ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನಷ್ಟು ಅಮೂಲ್ಯವಾದ ಅಧ್ಯಾಪನೆಗಳು ಮತ್ತು ಅವರಿಂದ ಪ್ರಕಟಿಸಲ್ಪಟ್ಟ ಬಹುಮಾನದ ಪಂಥಾಹ್ವಾನಗಳ ವೈಭವಯುತ ಪದಗಳು ನಾವು ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ಪ್ರಕಟಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

## ದಿವ್ಯದೂತರು (ಮಲಾಯಿಕ)

ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." ***(ಫತ್‌ಹೆ ಇಸ್ಲಾಮ್; ರೂಹಾನೀ ಖ಼ಝಾ಼ಇನ್ ಸಂಪುಟ 3, ಪುಟ 12)***

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕಾರ್ಯ ಮಾಡಿದಾಗ ಅವನು ಅದನ್ನು ಪುನರಾವರ್ತನೆ ಮಾಡುತ್ತಾನೆ, ಮನುಷ್ಯನಲ್ಲಿಯೂ ಸಹ ಈ ವಿಷಯ ಕಂಡುಬರುತ್ತದೆ. ಕೆಲವರಿಗೆ ಕೈ ಅಥವಾ ಪಾದಗಳನ್ನು ಅಲ್ಲಾಡಿಸುವ ಅಭ್ಯಾಸವಿರುತ್ತದೆ ಮತ್ತು ಅವರು ಮತ್ತೆ ಮತ್ತೆ ಅಲುಗಾಡಿಸುತ್ತಾರೆ. ಮತ್ತು ಅಭ್ಯಾಸದ ಅರ್ಥವೂ ಪದೇ ಪದೇ ಏನನ್ನಾದರೂ ಹೇಳುವುದು ಅಥವ ಮಾಡುವುದು ಎಂದಾಗಿದೆ ಈ ಗುಣವು ಸರ್ವಶಕ್ತನಾದ ಅಲ್ಲಾಹನಲ್ಲಿಯೂ ಇದೆ, ಆತನು ಒಂದು ವಿಶೇಷ ಸಂದರ್ಭದಲ್ಲಿ ತನ್ನ ಅನುಗ್ರಹವನ್ನು ನೀಡಿದಾಗ. ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನ್ ಅವತರಿಸಿದ್ದರಿಂದ ಪವಿತ್ರ ಖುರ್‌ಆನ್ ಪ್ರಕಟವಾದ ಸಂದೇಶವಾಹಕರನ್ನು ಅನುಸರಿಸಿದರೆ ಅಲ್ಲಾಹನ ಅಭ್ಯಾಗಳಿಗೆ ಹೋಲುವ ಗುಣಲಕ್ಷಣಗಳ ಪ್ರಕಾರ ಪ್ರವಾದಿ(ಸ) ಅವರನ್ನು ಅನುಸರಿಸುವ ಕಾರಣದಿಂದ ಪ್ರಪಂಚದಿಂದ ಬೇರ್ಪಟ್ಟವರಿಗೆ ಮತ್ತು ಜಗತ್ತಿನಲ್ಲಿ ವಾಸಿಸುತ್ತಿರುವಾಗಲೂ ಅದರೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ, ತಿನ್ನುವ ಮತ್ತು ಕುಡಿಯುವ ಪ್ರಮಾಣ ಕಡಿಮೆ ಮಾಡುತ್ತಾರೆ, ಅಸಭ್ಯ ಮಾತುಗಳಿಂದ ದೂರ ಇರುತ್ತಾರೊ ಅವರಿಗೆ ಸರ್ವಶಕ್ತನಾದ ಅಲ್ಲಾಹನು ತನ್ನ ಇಲ್‌ಹಾಮ್‌ನಿಂದ ಅವರನ್ನು ಅನುಗ್ರಹಿಸುತ್ತಾನೆ ಮತ್ತು ಅವರ ಮೇಲೆ ಸತ್ಯವಾದ ಮತ್ತು ಸರಿಯಾದ ಕನಸ್ಸುಗಳ ಬಾಗಿಲನ್ನು ತೆರೆಯುತ್ತಾನೆ ಮತ್ತು ಅದೃಶ್ಯ ರಹಸ್ಯಗಳ ಬಗ್ಗೆ ಅವರಿಗೆ ತಿಳಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಒಂದು ಇಲ್‌ಹಾಮ್ ಇದೆ:

ಫಿರ್ ಬಹಾರ್ ಆಈ ಖುದದಾ ಕಿ ಬಾತ್ ಫಿರ್ ಪೂರಿ ಹುಈ

(ಅಂದರೆ ಮತ್ತೆ ವಸಂತ ಋತು ಬಂತು ಅದರೊಂದಿಗೆ ಮತ್ತೆ ಅಲ್ಲಾಹನ ಮಾತು ಸಹ ಬಂದಿತು)

ಇದರಲ್ಲಿಯೂ ಸಹ ಅದೇ ಅಭ್ಯಾಸವನ್ನು ಉಲ್ಲೇಖಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಒಮ್ಮೆ ವಸಂತಕಾಲದಲ್ಲಿ ತನ್ನ ಕರುಣೆಯ ಮಹಿಮೆಯನ್ನು ತೋರಿಸಿದನು, ಆದ್ದರಿಂದ ಮತ್ತೆ ವಸಂತ ಕಾಲ ಬಂದಾಗ, ಸರ್ವಶಕ್ತನಾದ ಅಲ್ಲಾಹನ ಕರುಣೆಯು ಈಗ ನನ್ನ ದಾಸರು ಏನು ಹೇಳುತ್ತಾರೆಂದು ಹೇಳುತ್ತದೆ, ಆದ್ದರಿಂದ ನಾವು ಮತ್ತೆ ನಮ್ಮ ವೈಭವವನ್ನು ತೋರಿಸುತ್ತೇವೆ. ಮತ್ತು ದಾಸನು ಅದರ ಪ್ರಯೋಜನವನ್ನು ಪಡೆದರೆ, ನಂತರ ಅದೇ ಪ್ರತಿಫಲವು ಮುಂದಿನ ವಸಂತಕಾಲದಲ್ಲಿ ಪ್ರಕಟವಾಗುತ್ತದೆ, ಅಲ್ಲಾಹನ ವಾಕ್ಯವನ್ನು ಮರವೆಂದು ಪರಿಗಣಿಸಿದರೆ, ಅಭ್ಯಾಸದಂತೆಯೇ ಇರುವ ಅಲ್ಲಾಹನ ಗುಣಲಕ್ಷಣವು ಪ್ರತಿ ರಮಝಾನ್‌ನಲ್ಲಿ ಅವನನ್ನು ಅಲ್ಲಾಡಿಸುತ್ತದೆ ಮತ್ತು ಅದರಿಂದ ದೈವಭಕ್ತರು ತಾಜಾ ಹಣ್ಣುಗಳನ್ನು ಪಡೆಯುತ್ತಾರೆ.

ಮತ್ತೆ ಉಪವಾಸದಿಂದ ಆ ತುಕ್ಕು ಹಿಡಿದಿರುವ ಆಧ್ಯಾತ್ಮಿಕತೆಯು ಸಹ ಅಭಿವೃದ್ಧಿ ಹೊಂದುತ್ತದೆ, ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನಿಗಾಗಿ ತಿನ್ನುವುದನ್ನು ಮತ್ತು ಕುಡಿಯುವುದನ್ನು ತ್ಯಜಿಸಿದಾಗ, ಅವನು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಸಾಯಲು ಸಿದ್ಧನಾಗಿದ್ದಾನೆ ಎಂದರ್ಥ. ಮತ್ತು ಅವನು ತನ್ನ ಹೆಂಡತಿಯೊಂದಿಗೆ ವಿಶೇಷ ಸಂಬಂಧವನ್ನು ಮುರಿದಾಗ, ಅವನು ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ತನ್ನ ಸ್ವಂತ ಸಂತತಿಯನ್ನು ತ್ಯಾಗಮಾಡಲು ಸಿದ್ಧನಾಗಿರುತ್ತಾನೆ ಮತ್ತು ಉಪವಾಸದಲ್ಲಿ ಅವನು ಈ ಎರಡು ರೀತಿಯ ಉದಾಹರಣೆಗಳನ್ನು ನೀಡಿದಾಗ, ಅವನು ಸರ್ವಶಕ್ತನಾದ ಅಲ್ಲಾಹನನ್ನು ಭೇಟಿಯಾಗಲು ಅರ್ಹನಾಗಿರುತ್ತಾನೆ. ಸರ್ವಶಕ್ತನಾದ ಅಲ್ಲಾಹನೊಂದಿಗೆ ಸಂಪರ್ಕ ಮತ್ತು ಆಧ್ಯಾತ್ಮಿಕತೆಯ ಬಲವರ್ಧನೆಯಾದ ಕಾರಣದಿಂದ ಆ ವ್ಯಕ್ತಿಯನ್ನು ಅಂಧಾಕಾರದಿಂದ ಶಾಶ್ವತವಾಗಿ ಉಳಿಸಲಾಗುತ್ತದೆ.

**(ತಫ್ಸಿರ್ ಕಬೀರ್, ಸಂಪುಟ–2, ಪುಟ–379, ಖಾದಿಯಾನ್ ಆವೃತ್ತಿ 2010)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್[ಸ] ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕ)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯುದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 26 May 2022, Issue No. 21

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 20ರ ಉಳಿದ ಭಾಗ)**

### NDR ರೇಡಿಯೋದಿಂದ ಹುಝೂರರ ಸಂದರ್ಶನ

ಅನಂತರ ಕಾರ್ಯಕ್ರಮಗಳನ್ವಯ ಅತಿಥಿಗಳ ಸೇವೆಯಲ್ಲಿ ರಾತ್ರಿಯ ಭೋಜನ (ಡಿನ್ನರ್) ನೀಡಲಾಯಿತು. ಭೋಜನವಾದ ಕೂಡಲೇ NDR ರೇಡಿಯೋದ ಓರ್ವ ಪತ್ರಕರ್ತರ ಪ್ರತಿನಿಧಿ ಹುಝೂರರ ಸಂದರ್ಶನವನ್ನು ನಡೆಸಿದನು.

* ಪತ್ರಕರ್ತನು ಪ್ರಶ್ನೆ ಮಾಡಿದನು. ನೀವು ಪ್ರಸ್ತಾಪಿಸಿದಂತಹ ಧಾರ್ಮಿಕ ಸಮಾನತೆ ಮತ್ತು ಸಹಿಷ್ಣುತೆ ಸೌದಿ ಅರೇಬಿಯಾ ಮತ್ತು ಪ್ರಪಂಚದಲ್ಲಿರುವ ಇತರ ಮುಸಲ್ಮಾನರು ಏಕೆ ಈ ಶಿಕ್ಷಣದಂತೆ ನಡೆದುಕೊಳ್ಳುವುದಿಲ್ಲ?

ಅದರ ಉತ್ತರವಾಗಿ ಹುಝೂರ್ ಅನ್ವರ್ ನುಡಿದರು. ನನ್ನ ಕೆಲಸ ಕೇವಲ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ಪ್ರಸ್ತುತಪಡಿಸುವುದಾಗಿದೆ. ನಾನು ಒಬ್ಬರನ್ನು ಬಲವಂತ ಮಾಡಲು ಸಾಧ್ಯವಿಲ್ಲ. ಅಥವಾ ವಿವಶರನ್ನಾಗಿ ಮಾಡಲು ಸಾಧ್ಯವಿಲ್ಲ. ಎಲ್ಲಿಯವರೆಗೆ ನಮ್ಮ ಜಮಾಅತಿಗೆ ಸಂಬಂಧಿಸಿದ ಮಾತಾಗಿದೆ. ನಾನು ಯಾವಾಗಲೂ ಅವರಿಗೆ ಹೇಳುತ್ತೇನೆ. ಇಸ್ಲಾಮಿನ ನಿಜವಾದ ಮತ್ತು ಸುಂದರವಾದ ಶಿಕ್ಷಣಗಳ ಮೇಲೆ ಡನೆಯಿರಿ. ನಾನು ಎಲ್ಲಿ ಹೋದರೂ ಅಥವಾ ಎಲ್ಲಿ ನನಗೆ ಹೇಳುವ ಸಂದರ್ಭ ದೊರೆಯುತ್ತದೆ ಅಲ್ಲಿ ಅದನ್ನೇ ನಾನು ಹೇಳುತ್ತೇನೆ. ಆದುದರಿಂದ ನಾನು ಬಲವಂತದಿಂದ ಹೇರಲು ಸಾಧ್ಯವಿಲ್ಲ. ಆದರೆ ಎಲ್ಲಾ ಕಡೆ ಅದೇ ಸಂದೇಶ ತಲುಪಿಸುತ್ತೇನೆ. ಇಸ್ಲಾಮಿನ ಹೆಸರು ಕೆಡಿಸಬೇಡಿರಿ ಎಂದು. ಅಲ್ಲದೇ ಒಮ್ಮೆ ಅಂತೂ ನಾನು ಅವರಿಗೆ ನೇರವಾಗಿ ಸಂಬೋಧಿಸಿಯೂ ಹೇಳಿ ಆಗಿದೆ. ಇಸ್ಲಾಮಿನ ಹೆಸರು ಕೆಡಿಸಬೇಡಿರಿ. ಇಸ್ಲಾಮಂತೂ ಶಾಂತಿಯ ಧರ್ಮವಾಗಿದೆ. ದಯವಿಟ್ಟು ತನ್ನ ಧರ್ಮಗೋಸ್ಕರ ತಮ್ಮ ವೈಯಕ್ತಿಕ ಲಾಭಗಳನ್ನು ಪಡೆಯುವ ಬದಲಾಗಿ ನಿನಜವಾದ ಇಸ್ಲಾಮಿ ಶಿಕ್ಷಣದ ಮೇಲೆ ನಡೆದುಕೊಳ್ಳಿರಿ ಎಂದು.

* ಅನಂತರ ಆ ಪತ್ರಕರ್ತನು ಕೇಳಿದನು. ಜರ್ಮನಿನಲ್ಲಿಅಹ್ಮದಿಯಾ ಜಮಾಅತಿನ ಭವಿಷ್ಯ ಕುರಿತು ಹುಝೂರ್ ಅನ್ವರ್ ಅವರ ಆಭಿಪ್ರಾಯವೇನು?

ಆಗ ಹುಝೂರ್ ಅನ್ವರ್ ನುಡಿದರು. ಇಲ್ಲಿ ಜರ್ಮನಿಯಲ್ಲಿ ಜಮಾಅತ್ ತುಂಬಾ ಸಕ್ರೀಯವಾಗಿದೆ. ಯುವ ವರ್ಗ ವಿದ್ಯಾವಂತರಾಗಿದೆ. ನಮ್ಮ ಮಕ್ಕಳು ಶಾಲೆಗಳಲ್ಲಿ ವಿದ್ಯೆ ಪಡೆಯುತ್ತಿದ್ದಾರೆ. ಅವರಲ್ಲಿ ತುಂಬಾ ಬುದ್ಧಿವಮತರು ಮತ್ತು ಅರ್ಹ ವಿದ್ಯಾರ್ಥಿಗಳಿದ್ದಾರೆ. ಅದೇ ರೀತಿ ಯುವಕರ ಒಮದು ದೊಡ್ಡ ಭಾಗ ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಮತ್ತು ಕೆಲವರು PHD ಹಾಗೂ Research ಸಹ ಮಾಡುತ್ತಿದ್ದಾರೆ. ನಾವು ನಮ್ಮ ಯುವಕರಿಗೆ ಅದೇ ಹೇಳುವುದು ಲೌಕಿಕ ಶಿಕ್ಷಣಪ್ರಗತಿಯೊಂದಿಗೆ ತಮ್ಮ ಮೂಲಭೂತ ಕರ್ತವ್ಯವಾದ ತನ್ನ ಸೃಷ್ಟಿಕರ್ತನನ್ನು ಗುರುತಿಸುವ ಹಾಗೂ ಅವನ ಶಿಕ್ಷಣ ಮತ್ತು ಆಜ್ಞೆಗಳ ಮೇಲೆ ನಡೆಯುವುದನ್ನೂ ಮರೆಯಬೇಡಿರಿ.

ಅನಂತರ ಹುಝೂರ್ ಅನ್ವರ್ ಪ್ರೀತಿಪೂರ್ವಕವಾಗಿ ಕೆಲ ಸಮಯಕ್ಕಾಗಿ ಲಜ್ನ ಅವರ ಮಾರ್ಕಿಗೆ ಆಗಮಿಸಿದರು. ಅಲ್ಲಿ ಸ್ತ್ರೀಯರು ದರ್ಶನದ ಭಾಗ್ಯ ಪಡೆದರು ಮತ್ತು ತಮ್ಮ ಇಮಾಮರ ಪುಣ್ಯ ದರ್ಶನವನ್ನು ಪಡೆದರು ಬಾಲಕಿಯರ ಗುಂಪು ಪ್ರಾರ್ಥನಾ ಗೀತೆಗಳನ್ನು ಪ್ರಸ್ತುತಪಡಿಸಿದರು. ಮತ್ತು ತಮ್ಮ ಪ್ರೀತಿಯ ಇಮಾಮರಿಗೆ ಶುಭಕೋರಿದರು. ಹುಝುರೆ ಅನ್ವರ್ ಪ್ರೀತಿಪೂರ್ವಕವಾಗಿ ಬಾಲಕಿಯರಿಗೆ ಚಾಕ್‌ಲೇಟ್‌ಗಳನ್ನು ನೀಡಿದರು.

ಅನಂತರ ಹುಝೂರ್ ಅನ್ವರ್ ಮಸೀದಿಯ ಒಳಗೆ ಆಗಮಿಸಿದರು. ಅಲ್ಲಿ ಸ್ಥಳೀಯ ಆಯೋಜಕರು ಮತ್ತು ಕಾರ್ಯ ಸೇವೆ (ವಖಾರೆ ಅಮಲ್) ಮಾಡುವರು ಖುದ್ದಾಮ್, ಅನ್ಸಾರ್ ಮತ್ತು ಜರ್ಮನ್ ಅತಿಥಿಗಳು ಹುಝೂರ್ ಅನ್ವರ್ ಜೊತೆ ಚಿತ್ರಗಳನ್ನು ತೆಗೆಸುವ ಭಾಗ್ಯ ಪಡೆದರು.

ಅನಂತರ ಹುಝೂರ್ ಅನ್ವರ್ ಅದರ ಉತ್ತರವಾಗಿ ಹುಝೂರ್ ಅನ್ವರ್ ನುಡಿದರು. ಮಸೀದಿಯಿಂದ ಹೊರ ಬಂದು ಆ ಸಂದರ್ಭದಲ್ಲಿ ಉಪಸ್ಥಿತರ ಈ ಸಮಾರಂಭದಲ್ಲಿ ಪಾಲ್ಗೊಂಡವರಿಗೆ ಹಸ್ತಲಾಘವ ಭಾಗ್ಯ ದಯಪಾಲಿಸಿದರು.

**9 ಜೂನ್ 2015 ಮಂಗಳವಾರ (ಉಳಿದ ಭಾಗ)**

### ಓಸ್ನಬ್ರೋಕ್‌ನತ್ತ ಪ್ರಯಾಣ

ಕಾರ್ಯಕ್ರಮದನ್ವಯ ಓಸ್ನಾಬ್ರೂಕ್(Osnabruk) ಗೆ ಪ್ರಯಾಣಿಸಬೇಕಿತ್ತು. 8 ಗಂಟೆ 45 ನಿಮಿಷಕ್ಕೆ ಹುಝೂರ್ ಸಾಮೂಹಿಕವಾಗಿ ಪ್ರಾರ್ಥನೆ ಮಾಡಿಸಿ ತಮ್ಮ ತಂಡದೊಂದಿಗೆ ಓಸ್ನ ಬ್ರೂಕ್‌ನತ್ತ ಪ್ರಯಾಣ ಬೆಳೆಸಿದರು. VECTA ಯಿಂದ ಓಸ್ನಾಬ್ರೂಕ್‌ನಮುದಿತ ದೂರ 60 ಕಿ.ಮೀ ನಷ್ಟಿದೆ. ಸುಮಾರು 45 ನಿಮಿಷಗಳ ಪ್ರಯಾಣದ ನಂತರ 9 ಗಂಟೆವರೆಗೆ ಹುಝೂರ್(ಅಬಿಅ) ಮಸ್ಜಿದ್ ಬಶಾರತ್ ಓಸ್ನಾಬ್ರೂಕ್‌ಗೆ ತಲುಪಿದರು. ಸ್ಥಳೀಯ ಪುರುಷರು, ಮಹಿಳೆಯರು, ಯುವಕರು, ವೃದ್ಧರು ಮತ್ತು ಬಾಲಕ, ಬಾಲಕಿಯರು ಉತ್ಸಾಹದಿಂದ ಭವ್ಯವಾದ ಸ್ವಾಗತ ಕೋರುತ್ತಾ ಘೋಷಣೆಗಳನ್ನು ಕೂಗಿದರು. ಬಾಲಕ ಬಾಲಕಿಯರು ಪ್ರಾರ್ಥನೆಯ ಗೀತೆಗಳ ಮೂಲಕ ಸ್ವಾಗತ ಕೋರಿದರು. ಹುಝೂರೆ ಅನ್ವರ್(ಅಬಿಅ) ವಾಹನದಿಂದ ಬಂದಿಳಿಯುತ್ತಲೇ ಸ್ಥಳೀಯ ಅಮೇರಿಕಾದ ಮುಕರ್ರಮ್ ಇಶ್ತಿಯಾಖ್ ಅಹ್ಮದ್ ಸಾಹಿಬ್, ಸ್ಥಳೀಯ ಸದರ್ ಜಮಾಅತ್ ರಾನಾ ಹಫೀಝ್ ಅಹ್ಮದ್ ಸಾಹಿಬ್ ಮತ್ತು ಸ್ಥಳೀಯ ಮುಬಲ್ಲಿಗ್ ಮುಕರ್ರಮ್ ಮುಸ್ತನ್ಸಿರ್ ಅಹ್ಮದ್ ಸಾಹಿಬ್ ಅವರು ಹುಝೂರೇ ಅನ್ವರ್ ಅವರಿಗೆ ಸ್ವಾಗತ ಕೋರುತ್ತಾ ಹಸ್ತಲಾಘವ ಮಾಡುವ ಭಾಗ್ಯ ಪಡೆದರು.

ನಂತರ ಹುಝೂರೆ ಅನ್ವರ್(ಅಬಿಅ) ಕೈ ಬೀಸಿ ಎಲ್ಲರಿಗು ಅಸ್ಸಲಾಮು ಅಲೈಕುಂ ಹೇಳಿ ಮಿಶನ್ ಹೌಸಿನ ವಸತಿ ನಿಲಯಕ್ಕೆ ತೆರಳಿದರು.

ಹತ್ತು ಗಂಟೆಗೆ ಹುಝೂರೆ ಅನ್ವರ್ ಮಸ್ಜಿದ್ ಬಶಾರತ್‌ಗೆ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟು ವಸತಿ ನಿಲಯಕ್ಕೆ ಮರಳಿದರು.

* ಮಸ್ಜಿದ್ ಬಶಾರತ್, ಓಸ್ನಾಬ್ರೂಕ್, ಜರ್ಮನಿಯ ಒಂದು ನೂರು ಮಸೀದಿಗಳ ನಿರ್ಮಾಣ ಯೋಜನೆಯ ಅಡಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮಸೀದಿಗಳಲ್ಲಿ ಒಂದಾಗಿದೆ. ಅದರ ಉದ್ಘಾಟನೆ 2001 ರಲ್ಲಾಯಿತು. ಎರಡು ಗೋಪುರಗಳೊಂದಿಗೆ ಮಸ್ಜಿದ್ ಬಶಾರತ್ ತುಂಬ ಸುಂದರವಾಗಿ ಕಾಣುತ್ತದೆ. ಅದರಲ್ಲಿ ವಸತಿ ಭಾಗವಲ್ಲದೆ ಸ್ಥಳೀಯ ಜಮಾಅತಿನ ಕಚೇರಿಯೂ ಇದೆ. ಗ್ರಂಥಾಲಯವು ಇದೆ ಮತ್ತು ಅಡುಗೆ ಕೋಣೆ ಇತ್ಯಾದಿಗಳ ಸವಲತ್ತುಗಳೂ ಇವೆ.

* 26 ಸೆಪ್ಟೆಂಬರ್ 2005 ಸೋಮವಾರ KIEL ಜರ್ಮನಿಯಿಂದ ನನ್‌ಸ್ಪೇಟ್ (ಹಾಲೆಂಡ್) ಹೋಗುವಾಗ ಹುಝೂರೆ ಅನ್ವರ್ (ಅಬಿಅ) ಮಸ್ಜಿದ್ ಬಶಾರತ್‌ನಲ್ಲಿ ಕೆಲ ಸಮಯ ತಂಗಿದ್ದರು. ಮತ್ತು ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟಿದ್ದರು.

* 11 ಅಕ್ಟೋಬರ್ 2011ರ ಮಂಗಳವಾರ ಹುಝೂರೆ ಅನ್ವರ್(ಅಬಿಅ) ಹೆಂಬರ್ಗ್ (ಜರ್ಮನಿ) ಯಿಂದ ನನ್‌ಸ್ಪೇಟ್ ಹೋಗುವ ಹಾದಿಯಲ್ಲಿ ಮಸ್ಜಿದ್ ಬಶಾರತ್‌ನಲ್ಲಿ ಕೆಲ ಸಮಯಕ್ಕಾಗಿ ತಂಗಿದ್ದರು ಮತ್ತು ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟಿದ್ದರು.

* ಮತ್ತು 4 ಡಿಸೆಂಬರ್ 2012 ಮಂಗಳವಾರದಂದು ಹುಝೂರೆ ಅನ್ವರ್ (ಅಬಿಅ) ಬ್ರಸಲಝ್ (ಬೆಲ್ಜಿಯಂ) ಯಿಂದ ಹೆಂಬರ್ಗ್ (ಜರ್ಮನಿ) ಹೋಗುವಾಗ ರಾತ್ರಿ ಮಸ್ಜಿದ್ ಬಶಾರತ್ ಓಸ್ನಾಬ್ರೂಕ್‌ನಲ್ಲಿ ತಂಗಿದ್ದರು. ಮಗ್ರಿಬ್ ಇಶಾಅ ನಮಾಝುಗಳನ್ನು ಮತ್ತು ಮರುದಿನದ ನಮಾಝ್ ಫಜ್ರ್ ಇಲ್ಲಿಯೇ ನಿರ್ವಹಿಸಿಕೊಟ್ಟಿದ್ದರು.

* ಇದೀಗ 9 ಜೂನ್ 2015 ಮಂಗಳವಾರದಂದು ಹುಝೂರೆ ಅನ್ವರ್ (ಅಬಿಅ) ಫ್ರೆಂಕ್‌ಫರ್ಟ್ (ಜರ್ಮನಿ) ಯಿಂದ ಲಂಡನ್ನಿಗೆ ಮರಳುವಾಗ ನಾಲ್ಕನೆಯ ಸಲ ಮಸ್ಜಿದ್ ಬಶಾರತ್‌ನಲ್ಲಿ ತಂಗಿದ್ದರು. ಈ ಸಲವು ಹುಝೂರೆ ಅನ್ವರ್ ಒಂದು ರಾತ್ರಿಯ ಸಲುವಾಗಿ ಇಲ್ಲಿ ತಂಗಿದ್ದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.